ಢಕ್ಕೆಯ ಬೊಮ್ಮಣ್ಣ

ಎಚ್. ಎಸ್. ಮುಕ್ತಾಯಕ್ಕ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಮಾರ್ಚ, ೧೯೮೨

ಉಪನ್ಯಾಸ ಗ್ರಂಥಮಾಲೆ

೩೨೫

ಢಕ್ಕೆಯ ಬೊಮ್ಮಣ್ಣ

ಎಚ್. ಎಸ್. ಮುಕ್ತಾಯಕ್ಕ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಮಾರ್ಚ್, ೧೯೮೨

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು,

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಮಾರ್ಚ್, ೧೯೮೨

ಬೆಲೆ : ೫೦ ಪೈಸೆ

ಮುದ್ರಕರು :

ಎಂ. ಎಸ್. ಹಿರಿಯಣ್ಣಯ್ಯ

ನಿರ್ದೇಶಕರು,

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ

ಧಾರವಾಡ–೫೮೦ ೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೨೪ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-೫೮೦ ೦೦೩

ಡಿ. ಎಂ. ನಂಜುಂಡಪ್ಪ
ಕುಲಪತಿಗಳು

ಅರಿಕೆ

ಸೆಪ್ಟೆಂಬರ ೧೯೭೪ ರಲ್ಲಿ ರಾಯಚೂರ ಜಿಲ್ಲೆಯ ಕುಷ್ಟಗಿಯಲ್ಲಿ ನಡೆದ ಕರ್ನಾಟಕ ವಿಶ್ವವಿದ್ಯಾಲಯದ ೨೬೧ ನೆಯ ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರದಲ್ಲಿ ನಾನು "ಢಕ್ಕೆಯ ಬೊಮ್ಮಣ್ಣ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದೆ. ಆ ಉಪನ್ಯಾಸವೇ ಸ್ವಲ್ಪ ವಿಸ್ತರಣಗೊಂಡು ಇಂದು ಈ ಪುಸ್ತಿಕೆ ರೂಪವಾಗಿ ಹೊರಬರುತ್ತಿದೆ.

ಬಸವಣ್ಣನವರ ಕಾಲವೇ ಶಿವಶರಣರ ಕ್ರಾಂತಿಯ ಕಾಲವೆಂದು ಇದುವರೆಗೆ ಭಾವಿಸಲಾಗಿತ್ತು. ಆದರೆ ಈ ಕ್ರಾಂತಿಗೆ ನಾಂದಿಯಾಗಿ ಬಸವಪೂರ್ವ ಯುಗದಲ್ಲಿ ಅನೇಕ ಶರಣರು ಆಗಿ ಹೋಗಿದ್ದಾರೆ. ಅವರು ಹಾಕಿದ ತಳಹದಿಯ ಮೇಲೆಯೇ ಬಸವಣ್ಣ ಮತ್ತು ಆತನ ಸಮಕಾಲೀನರು ಶರಣಧರ್ಮವನ್ನು ನಿರ್ಮಿಸಿದರು.

ಕೆಲವು ಶರಣರು ಬಸವಪೂರ್ವದಲ್ಲಿ ಹುಟ್ಟಿ ಬಸವಣ್ಣನವರ ಕಾಲದವರೆಗೆ ಬದುಕಿದರು; ಅಂಥವರಲ್ಲಿ ಢಕ್ಕೆಯ ಬೊಮ್ಮಣ್ಣನೂ ಒಬ್ಬ. ಈತ ಶಂಕರದಾಸಿಮಯ್ಯನಿಗೆ ಕಿರಿಯ ಸಮಕಾಲೀನನಾಗಿ ಬಸವಣ್ಣನಿಗೆ ಹಿರಿಯ ಸಮಕಾಲೀನನಾಗಿದ್ದಾನೆ. ಈತನ ಚರಿತ್ರೆ ಈ ಪುಸ್ತಿಕೆಯಲ್ಲಿ ಸಂಕ್ಷಿಪ್ತವಾಗಿ ಮೂಡಿದೆ.

ಕಾವ್ಯ, ಚರಿತ್ರೆ, ಶಾಸನ ಹಾಗೂ ವಚನಗಳಿಂದ ಈ ವಿಷಯವನ್ನು ಹೆಕ್ಕಿ ತೆಗೆದುಕೊಟ್ಟು ನನ್ನ ಕಾರ್ಯದಲ್ಲಿ ಮಾರ್ಗದರ್ಶಕ

ರಾದ ನನ್ನ ತಂದೆ ಶಾಂತರಸರನ್ನು ಮೊದಲು ನೆನೆಯುವೆನು. ಇದನ್ನು ಬರೆಯುತ್ತಾ ಹೋದಂತೆ ಓದಿ ಸೂಕ್ತ ಕಂಡಲ್ಲಿ ಸಲಹೆ ನೀಡಿದ ನನ್ನ ತಾಯಿ ಲಕ್ಷ್ಮೀದೇವಿಯನ್ನೂ ಹಾಗೂ ಹಸ್ತಪ್ರತಿಯನ್ನು ಚೊಕ್ಕಟವಾಗಿ ಬರೆದುಕೊಟ್ಟ ನನ್ನ ಪತಿಯಾದ ಸದಾನಂದರನ್ನೂ ನೆನೆಯಲೇಬೇಕು.

ನನಗೆ ಈ ಅವಕಾಶವನ್ನು ಮಾಡಿಕೊಟ್ಟದ್ದಲ್ಲದೆ ಬರೆಯಲು ಪ್ರೋತ್ಸಾಹ ನೀಡಿದ ಶ್ರೀ ಚೆನ್ನವೀರ ಕಣವಿ ಹಾಗೂ ಶ್ರೀ ಎಲ್. ಎಮ್. ಗುಡ್ಡೀನ ಅವರಿಗೆ ಹೃತ್ಪೂರ್ವಕವಾಗಿ ಮಣಿಯುವೆನು. ಅಲ್ಲದೆ ಈ ಜನಪ್ರಿಯ "ಜ್ಞಾನಪ್ರಸಾರ"ದಲ್ಲಿ ನನಗೆ ಭಾಗವಹಿಸಲು ಅವಕಾಶ ಮಾಡಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗದ ಎಲ್ಲ ಪ್ರಮುಖರಿಗೆ ನನ್ನ ವಂದನೆಗಳು.

ರಾಯಚೂರು — **ಎಚ್. ಎಸ್. ಮುಕ್ತಾಯಕ್ಕ**

೧೬-೧೧-೭೯

ಪರಿವಿಡಿ

೧. ಶರಣ ಸಂಪ್ರದಾಯ

ಶರಣ ಸಂಪ್ರದಾಯ ಮತ್ತು ವಚನ ಸಾಹಿತ್ಯ ಹನ್ನೆರಡ ನೆಯ ಶತಮಾನದಲ್ಲಿ ಆರಂಭವಾಯಿತೆಂದು ಬಹುಜನರ ತಿಳಿವಳಿಕೆ ಯಾಗಿದೆ. ಆದರೆ ನಿಜಕ್ಕೂ ಈ ಸಂಪ್ರದಾಯ ಮತ್ತು ಸಾಹಿತ್ಯ ಹನ್ನೆರಡನೆಯ ಶತಮಾನಕ್ಕಿಂತ ಮುಂಚಿತವಾಗಿಯೇ ಆರಂಭ ವಾಗಿತ್ತೆಂಬುದಕ್ಕೆ ಈಗ ಖಚಿತ ಆಧಾರಗಳು ದೊರೆಯುತ್ತವೆ. ಆಗ ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಜೇಡರ ದಾಸಿಮಯ್ಯ ಶಂಕರದಾಸಿಮಯ್ಯ, ಕೊಂಡಗುಳಿ ಕೇಶಿರಾಜ, ಕೆಂಭಾವಿ ಭೋಗಣ್ಣ ಮುಂತಾದ ಶರಣರು ಭಕ್ತಿಯ, ಕ್ರಾಂತಿಯ ಬೀಜ ಬಿತ್ತಲು ನಾಡಿನ ನೆಲವನ್ನು ಹದಮಾಡಿದರು. ಅದೇ ನೆಲದಲ್ಲಿಯೇ ಬಸವಾದಿ ಪ್ರಮಥರು ಆ ಕ್ರಾಂತಿಯ ಬೀಜಗಳನ್ನು ನಾಡಿನ ತುಂಬೆಲ್ಲ ತೂರಿದರಲ್ಲದೆ ಬಿತ್ತಿ ಬೆಳೆದರು. ಅವು ಒಂದೊಂದು ತತ್ತ್ವವಾಗಿ, ನಾಣ್ಣುಡಿಯಾಗಿ ಬೆಳೆದು ನಿಂತವು. ಬಸವಪೂರ್ವಯುಗದ ಶರಣರ ಹೋರಾಟವು ಬಸವಣ್ಣನ ಬೃಹತ್‌ಕ್ರಾಂತಿಗೆ ನಾಂದಿಯಾಯಿತು. ಬಸವಣ್ಣನ ಹೋರಾಟದ ಹಿನ್ನೆಲೆಯಾಗಿ ಒಂದು ರಂಗಭೂಮಿ, ಸಿದ್ಧವಾಗತೊಡಗಿತ್ತು. ಆ ಬಸವಪೂರ್ವಯುಗದ ಶರಣರಲ್ಲಿ ಢಕ್ಕೆಯ ಬೊಮ್ಮಣ್ಣನೂ ಒಬ್ಬನಾಗಿ ಮೆರೆದಿದ್ದಾನೆ.

೨. ಕಾಲನಿರ್ಣಯ

ಢಕ್ಕೆಯ ಬೊಮ್ಮಣ್ಣನ ಕಾಲ ನಿರ್ಣಯಕ್ಕೆ ಶಂಕರದಾಸಿಮಯ್ಯ ಹಾಗೂ ಜೇಡರದಾಸಿಮಯ್ಯರ ಕಾಲ ನಿರ್ಣಯ ಸಹಾಯಕವಾಗುವದು. ಒಂದು ಢಕ್ಕೆಯ ಬೊಮ್ಮಣ್ಣ ಶಂಕರದಾಸಿಮಯ್ಯನ ಅಹಂಕಾರವನ್ನು ಕಳೆದುದು; ಎರಡು ಶಂಕರದಾಸಿಮಯ್ಯ ಜೇಡರದಾಸಿಮಯ್ಯನ ಅಹಂಕಾರವನ್ನು ದೂರೀಕರಿಸಿದುದು. ಹೀಗೆ ಈ ಮೂವರು ಹೆಚ್ಚುಕಡಿಮೆ ಸಮಕಾಲೀನರಾಗಿದ್ದುದು ತಿಳಿದಿದೆ. ಆದುದರಿಂದ ಢಕ್ಕೆಯ ಬೊಮ್ಮಣ್ಣನ ಕಾಲ ನಿರ್ಣಯಕ್ಕೆ ಇವರಿಬ್ಬರ ಕಾಲನಿರ್ಣಯವನ್ನು ಮೊದಲು ಮಾಡಬೇಕಾದುದು ಅಗತ್ಯ. ಅದೂ ಅಲ್ಲದೆ ಢಕ್ಕೆಯ ಬೊಮ್ಮಣ್ಣನ ಕಾಲನಿರ್ಣಯಕ್ಕೆ ಇವರನ್ನುಳಿದು ಬೇರೆ ಸಬಲ ಪ್ರಮಾಣಗಳಾವುವೂ ದೊರಕುವದಿಲ್ಲ. ಆದ್ದರಿಂದ ಮೊದಲು ಶಂಕರದಾಸಿಮಯ್ಯನ ಕಾಲ ನಿರ್ಣಯಿಸಬೇಕಾಗುವದು.

ಶಂಕರದಾಸಿಮಯ್ಯ ವಿಜಾಪುರ ಜಿಲ್ಲೆಯ ಹುನಗುಂದ ತಾಲೂಕಿನ ಕಂದಗಲ್ಲಿನವನು. ಕಂದಗಲ್ಲಿಗೆ ಆಗ ಸ್ಕಂದಶಿಲೆಯೆಂದು ಹೆಸರಿತ್ತು. ಈತನ ಸತಿ ಶಿವದಾಸಿ ಮತ್ತು ಮಗ ಸದ್ಯೋಜಾತರು ಬಟ್ಟೆ ಹೊಲಿಯುವ ಕಾಯಕವನ್ನು ಕೈಗೊಂಡಿದ್ದರು. ಒಮ್ಮೆ ಈತ ಕಾಶಿಗೆ ನಡೆದಾಗ ದಾರಿಯಲ್ಲಿ ಹತ್ತುವ ರಾಯಚೂರ ಜಿಲ್ಲೆಯ ಲಿಂಗಸೂಗೂರ ತಾಲೂಕಿಗೆ ಸೇರಿದ ಚಿತ್ತಾಪೂರ, ನವಿಲೆ ಎಂಬ ಊರಿನಲ್ಲಿದ್ದ ಜಟಾಶಂಕರನ ಮಂದಿರಕ್ಕೆ ಬಂದನು. ಜಟಾಶಂಕರನ ದರ್ಶನಮಾತ್ರದಲ್ಲಿ ಭಕ್ತಿಪರವಶನಾಗಿ ಅಲ್ಲಿಯೇ ಕಾಶಿಯ ವಿಶ್ವನಾಥನನ್ನು ಕಂಡನು. ಅನಂತರ ಕಾಶಿಗೆ ಹೋಗುವದನ್ನು

ಬಿಟ್ಟು ನವಿಲೆಯಲ್ಲಿಯೇ ನೆಲಸಿದನು. ಈತ ಶಿವನಿಂದ ಹಣೆಗಣ್ಣನ್ನು ಪಡೆದಿದ್ದನು; ಕ್ಷುಲ್ಲಕ ದೈವಗಳನ್ನು ಹಣೆಗಣ್ಣ ಬೆಂಕಿಯಿಂದ ಸುಡುತ್ತಿದ್ದನು. ಆ ದೇವರನ್ನು ಸೇವಕರನ್ನಾಗಿ ಮಾಡಿಕೊಂಡು ಸೇವಿಸಿಕೊಳ್ಳುತ್ತಿದ್ದನು. ಹೀಗೆ ಈತ ಏಕದೇವೋಪಾಸನೆಗೆ ಮಾರ್ಗ ಹಾಕಿಕೊಟ್ಟನು. ಈತನ ಬದುಕಿನ ಸಂಗತಿಗಳೆಲ್ಲ ವಿವಿಧ ಕಾವ್ಯ ಕೃತಿಗಳಲ್ಲಿ ಸಿಗುತ್ತವೆ.[೧]

ಈತನ ಕಾಲನಿರ್ಣಯಕ್ಕೆ ಬೇಕಾದ ಎರಡು ಸಬಲ ಆಧಾರಗಳಿವೆ. ಶಂಕರದಾಸಿಮಯ್ಯ ತನ್ನ ಹಣೆಗಣ್ಣಿನಿಂದ ಕೀಳು ದೈವಗಳನ್ನು ಸುಡುವನೆಂಬುದು ಆ ಕಾಲಕ್ಕೆ ಪ್ರಸಿದ್ಧಿ ಪಡೆದಿತ್ತೆಂದು ತೋರುವದು. ಇದನ್ನು ಕೇಳಿದ ಕಲ್ಯಾಣದಲ್ಲಿದ್ದ ಯುವರಾಜ ಮೂರನೆಯ ಜಯಸಿಂಹನು ಶಂಕರದಾಸಿಮಯ್ಯನನ್ನು ಕಲ್ಯಾಣಕ್ಕೆ ಕರೆಯಿಸಿಕೊಂಡು ಪರೀಕ್ಷಿಸಬೇಕೆಂದನು. ಅವನು ವಿಷ್ಣುಭಕ್ತನಾಗಿ ನರಸಿಂಹನನ್ನು ಪೂಜಿಸುತ್ತಿದನು. ಆಗ ಕೊಂಡೆಯರು ಅವನಲ್ಲಿಗೆ ಬಂದು, "ನವಿಲೆಯಲ್ಲಿ ಶಂಕರದಾಸಿಮಯ್ಯ ನೊಸಲಗಣ್ಣನ್ನು ಪಡೆದು ಪರದೈವ ಪ್ರತಿಮೆಗಳನ್ನು ದಹಿಸುತ್ತಿದ್ದಾನೆ; ತಾನು 'ಸಮಸ್ತ ಅನ್ಯದೈವ ಕೋಲಾಹಲ'ನೆಂಬ ಬಿರುದನ್ನಿಟ್ಟುಕೊಂಡು ಬಾಳುತ್ತಿದ್ದಾನೆ.

---

೧ (i) ಶಾಂತಲಿಂಗದೇಶಿಕಕೃತ, ಭೈರವೇಶ್ವರ ಕಾವ್ಯಕಥಾರತ್ನಕೋಶ ಭಾಗ ೧-೨

(ii) ಅದೃಶ್ಯಕವಿಯ ಪ್ರೌಢದೇವರಾಯ ಕಾವ್ಯ

(iii) ಉತ್ತರದೇಶದ ಬಸವಲಿಂಗ ವಿರಚಿತ ಬಸವೇಶ್ವರ ಪುರಾಣ ಕಥಾಸಾರ.

(iv) ತ. ಸು. ಶಾಮರಾಯರ ಶಿವಶರಣ ಕಥಾರತ್ನ ಕೋಶ.

(v) ಫ. ಗು. ಹಳಕಟ್ಟಿಯವರ ಶಿವಶರಣ ಚರಿತ್ರೆಗಳು ಭಾಗ-೩

(vi) ಶಾಂತರಸರ ಬಸವಪೂರ್ವಯುಗದ ಶರಣರು.

ಈಗವನು ಮುದನೂರಿನಲ್ಲಿದ್ದಾನೆ. ಅವನನ್ನು ಕಲ್ಯಾಣಕ್ಕೆ ಬರಮಾಡಿ
ಕೊಂಡು ಅವನ ಗರ್ವಭಂಗ ಮಾಡಬೇಕೆಂದು" ಅರುಹಿದರು.
ಅಂತೆಯೇ ಜಯಸಿಂಹ ಅವರ ಮಾತಿಗೆ ಒಡಂಬಟ್ಟು ಶಂಕರದಾಸಿ
ಮಯ್ಯನನ್ನು ಕರೆಯಿಸಿದನು, ಶಂಕರದಾಸಿಮಯ್ಯ ಅವರ ಬಯಕೆ
ಯಂತೆ, ಗರ್ಭಗುಡಿಯಲ್ಲಿ ನರಸಿಂಹದೇವರೆದುರು ನಿಂತುಕೊಂಡು
ತನ್ನ ಅಗ್ನಿನೇತ್ರದ ಮೇಲಿದ್ದ ಮೊಗವಾಡವನ್ನು ತೆರೆದೊಡನೆ,
ಅದರಲ್ಲಿದ್ದ ಮಹತ್ತರವಾದ ಜ್ವಾಲೆ ಹೊರಬಿದ್ದು ನರಸಿಂಹ
ದೇವರನ್ನು ಸುಟ್ಟಿತು. ಆಗ ಜಯಸಿಂಹನೊಡಗೂಡಿ ಉಳಿದವರೂ
ಪಶ್ಚಾತ್ತಾಪಪಟ್ಟು ಆತನಿಗೆ ಶರಣು ಹೋದರು. ಶಂಕರದಾಸಿ
ಮಯ್ಯ ಅವರನ್ನು ಸಂತೈಸಿದನು, ಈ ಮೂರನೆಯ ಜಯಸಿಂಹನು
ಯುವರಾಜನಾಗಿದ್ದ ಕಾಲವು ೧೦೭೬-೧೧೨೬[೧] ಈತ ೬ನೆಯ
ವಿಕ್ರಮಾದಿತ್ಯನ ತಮ್ಮನು. ಇದೇ ಕಾಲದಲ್ಲಿಯೇ ಶಂಕರದಾಸಿ
ಮಯ್ಯ ಕಲ್ಯಾಣಕ್ಕೆ ಹೋಗಿರಬೇಕು.

ಆದರೆ ಶಂಕರ ದಾಸಿಮಯ್ಯನ ಕಾಲನಿರ್ಣಯಕ್ಕೆ ಈ
ಒಂದೇ ಆಧಾರ ಸಾಕಾಗದು. ಆದ್ದರಿಂದ ನಾವು ಶಂಕರ
ದಾಸಿಮಯ್ಯನು ಜೇಡರದಾಸಯ್ಯನ ಅಹಂಕಾರವನ್ನು ಮುರಿದ
ಘಟನೆಯನ್ನು ತೆಗೆದುಕೊಳ್ಳಬೇಕಾಗುವದು. ಜೇಡರದಾಸಯ್ಯ
ಆಗಲೇ ತನ್ನ ವ್ಯಕ್ತಿತ್ವದಿಂದ ಪ್ರಸಿದ್ಧಿಪಡೆದಿದ್ದನು. ಈತನ ಊರು
ಈಗಿನ ಕಲ್ಬುರ್ಗಿ ಜಿಲ್ಲೆಯ ಸುರಪುರ ತಾಲೂಕಿನಲ್ಲಿರುವ

೧ "ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ" -ಸಂಪುಟ-೪ (ಬೆಂಗಳೂರು
ವಿಶ್ವವಿದ್ಯಾಲಯ) ಶಾಂತರಸರ ಲೇಖನ: ವಚನ ಸಾಹಿತ್ಯದ ಪ್ರಾರಂಭ
ಕಾರರು. ಪುಟ: ೬೨,೬೩.

ಮುದೇನೂರು. ಆ ಊರಿನ ರಾಮನಾಥ ಆತನ ಇಷ್ಟದೈವ; ಗೊಬ್ಬೂರಿನ ದುಗ್ಗಳೆಯನ್ನು ಮದುವೆಯಾಗಿದ್ದನು. ಬಟ್ಟೆ ನೇಯುವ ಕಾಯಕ ಕೈಗೊಂಡಿದ್ದನು. ಆತ ಒಮ್ಮೆ ಬಹು ಬೆಲೆ ಬಾಳುವ ಬಟ್ಟೆಯನ್ನು ನೆಯ್ದಿದ್ದನು, ಅದು ಮಾರಾಟವಾಗಲಿಲ್ಲ. ಆಗ ಅದನ್ನು ಜಂಗಮರೂಪಿ ಶಿವನಿಗೆ ಕೊಟ್ಟು ನವನಿಧಿಯನ್ನು ಪಡೆದನು. ಹೀಗೆ ಈತನ ಪ್ರಸಿದ್ಧಿಯನ್ನು ಕೇಳಿದ ಶಂಕರ ದಾಸಿಮಯ್ಯ ತಾನೂ ಆತನ ದರ್ಶನಕ್ಕೆ ಹಂಬಲಿಸಿ ತನ್ನ ಹೆಂಡತಿ ಶಿವದಾಸಿ ಹಾಗೂ ಶಿಷ್ಯ ವಕ್ರಪಾದನೊಡನೆ ಮುದೇನೂರಿಗೆ ಹೋಗಿ ಅಲ್ಲಿ ರಾಮನಾಥ ಮಂದಿರದಲ್ಲಿ ಬೀಡು ಬಿಟ್ಟನು. ಶಂಕರದಾಸಯ್ಯ ಬಂದ ಸುದ್ದಿ ಕೇಳಿ, ಜೇಡರದಾಸಯ್ಯ ತಾನೇ ದರ್ಶನ ಲಾಭಕ್ಕಾಗಿ ರಾಮನಾಥ ಮಂದಿರಕ್ಕೆ ಬಂದನು. ಇಬ್ಬರು. ಮಹಾಶಯರ ಕೂಟವು ಹಾಲಿನಲ್ಲಿ ಹಾಲು, ಬಯಲಿನಲ್ಲಿ ಬಯಲು, ಬೆಳಕಿನಲ್ಲಿ ಬೆಳಕು ಬೆರೆತಂತಿತ್ತು. ಅಲ್ಲಿ ಇಬ್ಬರೂ ಶಿವಾನುಭವವನ್ನು ನಡೆಸಿದರು. ತಮ್ಮ ಅನಿಸಿಕೆಗಳನ್ನು, ವಿಚಾರಗಳನ್ನು ವಿನಿಮಯ ಮಾಡಿಕೊಂಡರು. ಅವರಿಬ್ಬರಿಗೆ ಆನಂದವಾದುದಲ್ಲದೆ ಅಲ್ಲಿದ್ದವರಿಗೆಲ್ಲ ಮಹಾಬೆಳಗಿನ ದರ್ಶನ ಭಾಗ್ಯ ದೊರೆಯಿತು, ಅಂದು ಜನ, ಊರು, ಕೇರಿ ಎಲ್ಲ ಪುನೀತವಾದವು. ಪ್ರಸಾದದ ಸಮಯ ಮೀರಿತು. ಅನುಭವದಲ್ಲಿ ಇಬ್ಬರೂ ತೊಡಗಿದುದನ್ನು ಕಂಡ ಶಿವದಾಸಿ, ಆರೋಗಣೆಗೆ ಏರ್ಪಡಿಸಬೇಕೆಂದು ಬಗೆದು ಶಿಷ್ಯ ವಕ್ರಪಾದನನ್ನು ಕರೆದು, ಧಾನ್ಯವನ್ನು ತಿರಿದು ತರಲು ಕಳುಹಿದಳು. ಅದನ್ನು ತಿಳಿದು ಬಡತನವೆಂದು ಮರುಗಿದ ಜೇಡರ ದಾಸಿಮಯ್ಯ ತನ್ನ ಮನೆಗೆ ಹೋಗಿ ಅಲ್ಲಿಂದ ರಾಶಿಧಾನ್ಯವನ್ನು ಕಳುಹಿದನು.

ಆದರೆ ಶಿವಶರಣರಿಗೆ ಬಡತನ ಎಲ್ಲೆಂಬುದನ್ನು ಆತನು ಅರಿಯದೇ ಹೋದ, ಕ್ಷಣಕಾಲ ಮಾಯೆಯ ಮುಸುಕು ಜ್ಞಾನವನ್ನು ಆವರಿಸಿತ್ತು. ಶಿವನು ತನಗೆ ತವನಿಧಿಯನಿತ್ತಿರುವನೆಂಬ ಗರ್ವದಿಂದ ಯಾರಿಗೆ ತಾನು ಧಾನ್ಯ ಕಳುಹುತ್ತಿದ್ದೇನೆ ಎಂಬುದನ್ನೂ ಮರೆತನು. ಅದನ್ನರಿತ ಶಂಕರದಾಸಿಮಯ್ಯ ಆ ಧಾನ್ಯದಲ್ಲಿ ಕೈಯಾಡಿಸಿದನು. ತಕ್ಷಣವೇ ಜೇಡರದಾಸಯ್ಯನ ಮನೆಯಲ್ಲಿದ್ದ ತವನಿಧಿಯೆಲ್ಲ ಬಯಲಾಯಿತು. ತವನಿಧಿ ಬಯಲಾದುದನ್ನು ಕಂಡ ಜೇಡರದಾಸಯ್ಯನಿಗೆ ತನ್ನ ತಪ್ಪಿನ ಅರಿವಾಯಿತು. ಸತಿ ದುಗ್ಗಳೆಯು ಪತಿಗೆ ತುಸು ಸಿಟ್ಟು ಮಾಡಿದಳು. ಜೇಡರದಾಸಯ್ಯನ ಮಾಯೆಯ ಮುಸುಕು ಹರಿದು, ಅಹಂಕಾರ ಬಯಲಾಯಿತು. ತನ್ನ ಕಾರ್ಯಕ್ಕಾಗಿ ಪಶ್ಚಾತ್ತಾಪಪಟ್ಟನು. ಆಗಲೇ ಶಂಕರದಾಸಯ್ಯನಲ್ಲಿ ಕ್ಷಮೆ ಕೇಳಲು ಹೋದನು. ಶಂಕರದಾಸಯ್ಯ ನಗುತ್ತಲೇ "ಬಡವರು ನಾವು, ನಮ್ಮಂಥವರ ಮನೆಗೆ ಏಕೆ ಧಾನ್ಯ ಕಳುಹಿದಿರಿ? ನಾವು ಶಿವನ ಮಕ್ಕಳು, ತಿರಿದು ಉಣ್ಣುವವರು" ಎಂದನು. ನಗುತ್ತ ನುಡಿದರೂ ಮಾತಿನ ಒಡಲಲ್ಲಿದ್ದ ವ್ಯಂಗಾರ್ಥವು ಜೇಡರದಾಸಯ್ಯನ ಮನವನ್ನು ಈಟಿಯಂತೆ ಇರಿಯಿತು. ಆಗ ಆತ "ಅಹಂಕಾರದ ಕಂಗಳಿಂದ ತಮ್ಮನ್ನು ನೋಡಿದನು: ಅಲ್ಲಿ ಕಂಡದ್ದು ನೀವಲ್ಲ, ನಿಮ್ಮ ಘನತೆಯಲ್ಲ, ಕೇವಲ ನಾನು ತಿಳಿದಿದ್ದ ನಿಮ್ಮ ಬಡತನ ಮಾತ್ರ. ತಾವು ಬಡವರಲ್ಲ; ಶಿವಶರಣರೆಂದಾದರೂ ಬಡವರೆ? ಇಂದು ನನ್ನ ಅಹಂಕಾರ ದೂರಾಯಿತು. ಈಗ ನಾನು ನನ್ನ ಅರಿವಿನ ಕಂಗಳಿಂದ ತಮ್ಮ ವ್ಯಕ್ತಿತ್ವದ ದರ್ಶನ ಪಡೆಯುತ್ತಿರುವೆನು. ನನ್ನನ್ನು ಮನ್ನಿಸಬೇಕು." ಎಂದು ಅನನ್ಯ

ನಾಗಿ ಬೇಡಿದಾಗ ಮತ್ತೆ ತವನಿಧಿ ಲಭ್ಯವಾಯಿತು. ಈ ರೀತಿಯಾಗಿ ಜೇಡರದಾಸಯ್ಯನಿಗೆ ಬಂದ ಅಹಂಕಾರವನ್ನು ಶಂಕರದಾಸಯ್ಯ ದೂರುಮಾಡಿದನು. ಈ ಘಟನೆಯು ಅನೇಕ ಕಾವ್ಯ ಹಾಗೂ ಗ್ರಂಥಗಳಲ್ಲಿ ಬರುವದು.[೧] ಈ ಘಟನೆಯನ್ನು ನೋಡಿದಾಗ ಇವರಿಬ್ಬರೂ ಸಮಕಾಲೀನರಾಗಿದ್ದರೆಂಬುದು ಸುವ್ಯಕ್ತವಾಗುವದು. ಆದ್ದರಿಂದ ಈ ಘಟನೆ ಶಂಕರದಾಸಿಮಯ್ಯನ ಕಾಲನಿರ್ಣಯಿಸುವಲ್ಲಿ ಸಹಕಾರಿಯಾಗುವದರಿಂದ ನಾವು ಮೊದಲು ಜೇಡರದಾಸಯ್ಯನ ಕಾಲನಿರ್ಣಯಿಸಬೇಕಾಗುವದು.

ಜೇಡರದಾಸಯ್ಯನ ಕಾಲನಿರ್ಣಯಕ್ಕೆ ಖಚಿತ ಆಧಾರಗಳು ದೊರಕುವವು. ಕ್ರಿ.ಶ. ೧೧೫೦ ರಲ್ಲಿದ್ದ ಬ್ರಹ್ಮಶಿವನು ತನ್ನ ಸಮಯ ಪರೀಕ್ಷೆಯಲ್ಲಿ[೨] ಜೇಡರದಾಸಯ್ಯನಿಗೆ ರಾಮನಾಥನು ಬಾಗಿಲು ತೆಗೆದದ್ದನ್ನು ಹಾಸ್ಯ ಮಾಡಿದ್ದಾನೆ. ಈ ಪವಾಡ ನಡೆದು

---

೧ (i) ಉತ್ತರ ದೇಶದ ಬಸವಲಿಂಗ ವಿರಚಿತ ಬಸವೇಶ್ವರ ಪುರಾಣ ಕಥಾಸಾಗರ.
(ii) ಶಾಂತಲಿಂಗದೇಶಿಕಕೃತ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಭಾಗ-೧
(iii) ಫ. ಗು. ಹಳಕಟ್ಟಿ ವಿರಚಿತ ಶಿವಶರಣರ ಚರಿತ್ರೆಗಳು ಭಾಗ-೩
(iv) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ-೩, ಶಾಂತರಸ ಲೇಖನ : ಸಾಹಿತ್ಯದ ಪ್ರಾರಂಭಕಾರರು,
(v) ತ. ಸು. ಶಾಮರಾಯರ ಶಿವಶರಣ ಕಥಾ ರತ್ನಕೋಶ.

೨ ರಂ. ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ ಪುಟ: ೨೩ ಮತ್ತು ೧೨೫.

ಜನಜನಿತವಾಗಿ ಬ್ರಹ್ಮಶಿವನ ಕಿವಿಗೆ ಬೀಳಲು ಬಹಳ ವರ್ಷಗಳೇ ಹಿಡಿದಿರಬೇಕು. ಆತ ತನ್ನ ಕಾವ್ಯದಲ್ಲಿ ಈತನ ಪವಾಡವನ್ನು ಉಲ್ಲೇಖಿಸಬೇಕಾದರೆ ಜೇಡರದಾಸಿಮಯ್ಯ ೧೧೫೦ ಕ್ಕಿಂತ ಹಿಂದೆ ಇದ್ದಿರಬೇಕು. ಇದು ಬ್ರಹ್ಮಶಿವನ ಕಾವ್ಯದ ಆಧಾರವಾದರೆ, ಬಹು ದೊಡ್ಡ ಆಧಾರ ಶಾಸನಗಳದು. ಶಾಸನಗಳ ಆಧಾರ ನಿಖರವಾದುದು, ನಿಶ್ಚಿತವಾದುದೆಂದು ತಿಳಿಯಬಹುದು. ಈತನ ಬಗ್ಗೆ ಒಟ್ಟು ಹತ್ತು ಶಾಸನಗಳು ಸಿಗುತ್ತವೆ.[೩] ಇವುಗಳಲ್ಲಿ ಆತನ ಶಿಷ್ಯ ಪರಂಪರೆ, ಘನತೆಗೌರವ, ವ್ಯಕ್ತಿತ್ವ ಅಭಿವ್ಯಕ್ತವಾಗುವದು. ಈ ಹತ್ತು ಶಾಸನಗಳಲ್ಲಿ ಗೊಬ್ಬೂರಿನದೇ[೪] ಅತಿ ಪ್ರಾಚೀನವಾದ ಶಾಸನವು. ಇದು ಕಾಲನಿರ್ಣಯಕ್ಕೆ ಹೆಚ್ಚು ಸಹಕಾರಿಯಾಗಿದೆ. ಇದರಲ್ಲಿ ಗೊಜ್ಜೇಶ್ವರ ದೇವಾಲಯಕ್ಕೆ ದತ್ತಿಬಿಟ್ಟುದನ್ನೂ ಆತನ ಶಿಷ್ಯ ಪರಂಪರೆಯನ್ನೂ ಹೇಳಲಾಗಿದೆ. ಈ ಪ್ರಾಚೀನ ಶಾಸನದ ಕಾಲವು ಕ್ರಿ.ಶ. ೧೧೪೮ ಆಗಿದೆ. ಹಾಗೂ ಇವನ ಬಗ್ಗೆ ಈಗ ಲಭ್ಯವಾದ ಕೊನೆಯ ಶಾಸನದ ಕಾಲವು ಕ್ರಿ.ಶ. ೧೨೦೧[೫] ಆಗಿದೆ. ಕ್ರಿ.ಶ. ೧೧೪೮ರ ಶಾಸನದಲ್ಲಿ ಆತನ ಶಿಷ್ಯ ಪರಂಪರೆಯನ್ನು ಹೇಳಲಾಗಿದೆ. "ಅವರೆಲ್ಲ ನೇರವಾದ ಶಿಷ್ಯರಾಗಿರದೆ ಪರಂಪರೆಯ ಶಿಷ್ಯರಾಗಿರಬೇಕು[೬]" ಎನ್ನುವ ಶ್ರೀ

---

೩ ಡಾ|| ಎಂ. ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು, ಪುಟ : ೩೫-೩೮.

೪ ಅದೇ ,, ,, ೩೫

೫ ಅರಸೀಕೆರೆ ತಾಲೂಕಿನ ಗೀಜಗನಹಳ್ಳಿ ಶಾಸನ (೧೨೦೧) ಇದರಲ್ಲಿ ಜೇಡರದಾಸಯ್ಯನ ಮಗ "ಕಾಟೀಗೌಡ" ದತ್ತಿ ಬಿಟ್ಟ ವಿವರ ಇದೆ. ಮಗನೆಂದರೆ ಇಲ್ಲಿ ಶಿಷ್ಯನೆಂದೇ (ಅರ್ಥ. ಡಾ|| ಎಂ. ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು ಪುಟ ೩೬-೩೭)

೬ ಡಾ|| ಎಂ. ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು ಪುಟ-೩೬

ಎಂ.ಎಂ. ಕಲ್ಬುರ್ಗಿಯವರ ಮಾತು ಮನನೀಯವಾಗಿದೆ. ಅಂದ ಮೇಲೆ ಕ್ರಿ.ಶ. ೧೧೪೮ ರ ಈ ಶಾಸನವು ಆತನ ಶಿಷ್ಯಸಂಪ್ರದಾಯ ಬೆಳೆದು ಒಂದು ಒಂದೂವರೆ ತಲೆಮಾರಿನ ಬಳಿಕ ಹುಟ್ಟಿರಬೇಕು. ಮತ್ತು ಆ ಶಿಷ್ಯ ಸಂಪ್ರದಾಯವು ಕ್ರಿ.ಶ. ೧೨೦೧ ರ ವರೆಗೆ ಮುಂದುವರೆದಿರಬೇಕು ಇದರಿಂದ ಜೇಡರ ದಾಸಿಮಯ್ಯ ಸುಮಾರು ೧೧೪೮ ಕ್ಕಿಂತ ಹಿಂದೆ ಇದ್ದನೆಂದಾಗುವದು. ಈ ಶಾಸನಗಳ ಆಧಾರದ ಮೇಲೆ ಆತ ೧೧೪೮ ರ ಈಚೆಯವನಲ್ಲವೆಂದಂತಾಯಿತು.

ಈತನ ಒಂದು ವಚನ ಈತನ ಕಾಲನಿರ್ಣಯಕ್ಕೆ ಸಬಲ ಸಹಕಾರಿಯಾಗಿದೆ.

> ನೆಱೆನಂಬಿ ಕರೆದಡೆ ನರಿ ಕುದುರೆಯಾಗಿ ಹರಿಯವೆ ?
> ಜಗವೆಲ್ಲಱಿಯಲು ತೊಱೆಯೊಳಗೆ ಬಿದ್ದ ಲಿಂಗ
> ಕರೆದರೆ ಬಂದುದು ಕರಸ್ಥಲಕ್ಕೆ |
> ನಂಬದೇ ಕರೆದವರ ಹಂಬಲನೊಲ್ಲ ನಮ್ಮ ರಾಮ
> ನಾಥ[೩] |

ಜೇಡರ ದಾಸಿಮಯ್ಯ ಶ್ರೇಷ್ಠ ವಚನಕಾರ. ಈತನ ವಚನಾಂಕಿತವು 'ರಾಮನಾಥ'. ಈ ವಚನದಲ್ಲಿ ಆತ ಕೊಂಡಗುಳಿ ಕೇಶಿರಾಜನ ಪವಾಡದ ಬಗೆಗೆ ಹೇಳಿದ್ದಾನೆ. ಜಗವೆಲ್ಲಱಿಯಲು ತೊಱೆಯೊಳಗೆ ಬಿದ್ದ ಲಿಂಗ ಕರೆದರೆ ಬಂದುದು ಕರಸ್ಥಲಕ್ಕೆ ಎಂಬುದೇ ಆತನ ಪವಾಡ. ಕೊಂಡಗುಳಿ ಕೇಶಿರಾಜ ಬಸವಪೂರ್ವಯುಗದ ಶರಣ. ಈತ ಕಲ್ಯಾಣದ ಆರನೆಯ ವಿಕ್ರಮಾದಿತ್ಯನಲ್ಲಿ ಮಂತ್ರಿ

೩ ಎಲ್. ಬಸವರಾಜು : (ಸಂ) ದೇವರದಾಸಿಮಯ್ಯನ ವಚನಗಳು, ವಚನ ಸಂಖ್ಯೆ ೩೮.

ಯಾಗಿದ್ದನು[೧]. ದೊರೆ ಹಾಗು ಈತನಲ್ಲಿ ವಿರಸ ಹುಟ್ಟಿ ಈತ ಮಂತ್ರಿ ಪದವಿಯನ್ನು ತ್ಯಜಿಸಿದನು.

ಕೇಶಿರಾಜನ ಎರಡು ಶಾಸನಗಳು ಜೇಡರದಾಸಿಮಯ್ಯ ಹಾಗೂ ಕೇಶಿರಾಜರ ಕಾಲನಿರ್ಣಯಕ್ಕೆ ಸಹಕಾರಿಯಾಗಿವೆ. ಒಂದು ಶಾಸನ ಕ್ರಿ. ಶ. ೧೧೦೭ ಕಾಲದ್ದು; ಇನ್ನೊಂದು ಶಾಸನ ಕ್ರಿ. ಶ. ೧೧೩೭ರಲ್ಲಿ ರಚಿತವಾದುದು. ಇವೆರಡು ಶಾಸನಗಳು ವಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿಗೆ ಸೇರಿದ ಕೊಂಡಗುಳಿಯಲ್ಲಿವೆ.

ಕೊಂಡಗುಳಿ ಕೇಶಿರಾಜ ಮಂತ್ರಿಪದವಿಯನ್ನು ತ್ಯಜಿಸಿ, ಶರಣ ತೆಲುಗು ಬೊಮ್ಮಯ್ಯನನ್ನು ಕಂಡು, ಮರಳಿ ಕಲ್ಯಾಣಕ್ಕೆ ನಡೆದನು. ದಾರಿಯಲ್ಲಿ ಬರುವ ಭೀಮಾನದಿಯ ದಂಡೆಯಲ್ಲಿ ಕುಳಿತು ಅಂಗೈಯಲ್ಲಿ ಲಿಂಗ ಹಿಡಿದು ಧ್ಯಾನಮಗ್ನನಾದನು. ಅದೇ ಹೊತ್ತಿಗೆ ಗರುಡವೊಂದು ಬಂದು ಲಿಂಗವನ್ನು ಕಚ್ಚಿಕೊಂಡು ಹೋಗಿ ನದಿಯಲ್ಲಿ ಹಾಕಿಬಿಟ್ಟಿತು. ಆದಿ ಅನಾದಿ ಇರದ ಲಿಂಗಯ್ಯ ಕೇಶಿರಾಜನ ಅಂಗೈಯಿಂದ ಭೀಮೆಯ ಒಡಲನ್ನು ಸೇರಿದನು ಆಗ ಕೇಶಿರಾಜ ಲಿಂಗವನ್ನು ಹುಡುಕಲು ದೋಣಿಯೊಳು ಕುಳಿತು ಹೊರಟನು. ಅದಕ್ಕೆ ಶಿವ ಸೋತು ಕೇಶಿರಾಜನಿಗೆ ಒಲಿದನು. ಲಿಂಗವು ಅವನ ಅಂಗೈಯೊಳಗೆ ಬಂದು ಸೇರಿತು. ಈ ಪವಾಡವು ಕೇಶಿರಾಜ ಮಂತ್ರಿ ಪದವಿಯನ್ನು ತ್ಯಜಿಸಿದಾಗ ನಡೆಯಿತೆಂದು ಹರಿಹರ ಹೇಳುವನು.[೨]

---

೧ ಡಾ॥ ಎಂ. ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು ಪುಟ ೪೨

೨ ಡಾ. ಎಂ. ಎಸ್. ಸುಂಕಾಪುರ : ಹಂಪೆಯ ಹರಿಹರದೇವ ಕೃತ ನೂತನ ಪುರಾತನರ ರಗಳೆಗಳು, ಪುಟ ೧೯೫

ಕ್ರಿ.ಶ. ೧೧೦೭ ರಲ್ಲಿ ಶಾಸನದಲ್ಲಿ ಕೇಶಿರಾಜನನ್ನು ಸಕಲ ಬಿರುದಾವಳಿಗಳೊಡನೆ ಹೊಗಳಲಾಗಿದೆ. ಇದರಿಂದ ಆತನು ಆಗ ಮಂತ್ರಿಯಾಗಿದ್ದನೆಂದು ಖಚಿತವಾಗುವದು. ಕ್ರಿ.ಶ. ೧೧೩೨ ರ ಶಾಸನದಲ್ಲಿ ಅವನ ಬಗ್ಗೆ ಬಿರುದಾವಳಿಗಳಿಲ್ಲ. ಈ ಶಾಸನದ ಕಾಲಕ್ಕೆ ಆತ ಮಂತ್ರಿಯಾಗಿರಲಿಲ್ಲವೆಂಬುದು ಸ್ಪಷ್ಟವಾಗುವದು. ಆದರೆ ಆತ ನಿಶ್ಚಿತವಾಗಿ ಎಂದು ಮಂತ್ರಿ ಪದವಿ ತ್ಯಜಿಸಿದನೆಂಬುದು ತಿಳಿಯುವದಿಲ್ಲ. ಆದರೆ ಆತ ೧೧೨೦–೨೫ ರ ಅವಧಿಯಲ್ಲಿ ಮಂತ್ರಿ ಪದವಿ ತೊರೆದು ಪವಾಡ ಮೆರದಿರಬೇಕು ಎನಿಸದಿರದು. ಮುದೆನೂರಿಗೂ ಕೊಂಡಗುಳಿಗೂ ಸುಮಾರು ಐವತ್ತು ಮೈಲುಗಳ ಅಂತರ ಮಾತ್ರ. ಈ ಪವಾಡದ ಸುದ್ದಿ ಕೊಂಡಗುಳಿಯಿಂದ ಮುದೆನೂರಿಗೆ ತಲುಪಿ ಜೇಡರದಾಸಯ್ಯನ ಕಿವಿಗೆ ಬಿದ್ದಿರಬೇಕು. ಆಗ ಆತ ಹೃದಯ ತುಂಬಿ ಮೇಲಿನ ವಚನವನ್ನು ಹಾಡಿರಬೇಕು. ಕೇಶಿರಾಜ ೧೧೦೭ ಕ್ಕಿಂತ ಮುನ್ನ ಹುಟ್ಟಿ ೧೧೩೨ ರ ತರುವಾಯದವರೆಗೆ ಬದುಕಿದನೆಂದು ಹೇಳಬಹುದು. ಅಂದ ಮೇಲೆ ಕೇಶಿರಾಜನ ಪವಾಡ ಕೇಳಿ ವಚನ ರಚಿಸಿರಬಹುದಾದ ಜೇಡರದಾಸಿಮಯ್ಯ ೧೧೨೫ ಕ್ಕಿಂತ ಮೊದಲಿನವನು ಮತ್ತು ೧೧೫೦ ರ ಈಚೆಯವನಲ್ಲವೆಂದು ನಿರ್ಧಾರವಾಗುವದು. ಜೇಡರದಾಸಿಮಯ್ಯ ಹಾಗೂ ಶಂಕರದಾಸಿಮಯ್ಯರ ಕಾಲನಿರ್ಣಯ ಮಾಡಿದಾಗ ಅವರಿಬ್ಬರೂ ೧೧೫೦ ಕ್ಕಿಂತ ಈಚೆಯವರಾಗಿರದೇ ೧೧೨೫ ಕ್ಕಿಂತ ಮೊದಲಿದ್ದವರಾಗಿ ಸಮಕಾಲೀನರಾಗುವರು. ೧೧೨೫ ರಷ್ಟರಲ್ಲಿಯೇ ಅವರು ಅನುಭಾವಿಗಳಾಗಿ ಪ್ರಸಿದ್ಧರಾಗಿದ್ದರು. ಅಲ್ಲದೆ ಅವರ ಹುಟ್ಟು ಇದಕ್ಕಿಂತ ೬೦–೭೦ ವರ್ಷ ಹಿಂದೆ ಹೋಗುವದು.

ಶಂಕರದಾಸಿಮಯ್ಯ ಜೇಡರದಾಸಿಮಯ್ಯನ ಅಹಂಕಾರವನ್ನು ಕಳೆದನು. ಶಂಕರದಾಸಿಮಯ್ಯನ ಅಹಂಕಾರವನ್ನು ಡಕ್ಕೆಯ ಬೊಮ್ಮಣ್ಣ ಕಳೆದನು. ಈ ಘಟನೆಯು ಬಹು ಸುಂದರವಾಗಿ ಅನೇಕ ಕಾವ್ಯ ಹಾಗೂ ಗ್ರಂಥಗಳಲ್ಲಿ ಬರುವದು[೧] ಆದರೆ ಈತನ ಚರಿತ್ರೆ ಬಸವಪುರಾಣ ಹಾಗೂ ಹರಿಹರನ ರಗಳೆಯಲ್ಲಿ ಬರುವದಿಲ್ಲ. ಇದೇ ಸೋಜಿಗದ ಸಂಗತಿ. ಅಲ್ಲದೆ ಢಕ್ಕೆಯ ಬೊಮ್ಮಣನ ಕಾಲ ನಿರ್ಣಯಕ್ಕೆ ಬೇಕಾದ ಯಾವುದೇ ರೀತಿಯ ಆಧಾರಗಳೂ ಸಿಗದೆ ಕೇವಲ ಈ ಘಟನೆಯೊಂದೇ ಆಧಾರವಾಗಿ ನಿಲ್ಲುವದು. ಆದ್ದರಿಂದ ಮೊದಲು ನಾವು ಶಂಕರದಾಸಿಮಯ್ಯ ಹಾಗೂ ಜೇಡರದಾಸಿಮಯ್ಯರ ಕಾಲ ನಿರ್ಣಯಿಸಬೇಕಾಯಿತು. ಢಕ್ಕೆಯ ಬೊಮ್ಮಣ್ಣ ಶಂಕರದಾಸಯ್ಯನ ಅಹಂಕಾರ ಕಳೆದ ಘಟನೆಯ ವಿವರ ಮುಂದೆ ವಿವರವಾಗಿ ಚರ್ಚಿಸಲಾಗಿದೆ. ಬೊಮ್ಮಯ್ಯ ಶಂಕರದಾಸಯ್ಯನ ಇಳಿವಯಸ್ಸಿನಲ್ಲಿ ಅಂಹಕಾರ ಕಳೆದಿರಬೇಕು. ಆಗ ಬೊಮ್ಮಣ ತಾರುಣ್ಯದಲ್ಲಿ ಇರಬೇಕು. ಶಂಕರದಾಸಿಮಯ್ಯ ೧೧೫೦ ಕ್ಕಿಂತ ಮೊದಲು ಬಾಳಿದವನೆಂದು ಕಾಲ ನಿರ್ಣಯಿಸಲಾಗಿದೆ. ಬಹುಶಃ ೧೧೨೫ ರ ಹೊತ್ತಿಗೆ ಬೊಮ್ಮಣ್ಣ ಆತನ ಅಹಂಕಾರ ದೂರೀಕರಿಸಿರಬೇಕು. ಆಗ

---

೧ (i) ಅದೃಶ್ಯ ಕವಿಯ ಪ್ರೌಢದೇವರಾಯನ ಕಾವ್ಯ
(ii) ಸಿದ್ಧನಂಜೇಶ ವಿರಚಿತ ಗುರುರಾಜ ಚಾರಿತ್ರ
(iii) ಶಾಂತಲಿಂಗದೇಶಿಕಕೃತ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಭಾಗ-೧
(iv) ಶ್ರೀ ಫ. ಗು. ಹಳಕಟ್ಟಿಯವರ ಶಿವಶರಣರ ಚರಿತ್ರೆಗಳು ಭಾಗ-೨
(v) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಭಾಗ-೩-ವಚನ ಸಾಹಿತ್ಯದ ಪ್ರಾರಂಭಕಾರರು, ಶಾಂತರಸ ಲೇಖನ.

ಬೊಮ್ಮಣ್ಣ ತಾರುಣ್ಯದಲ್ಲಿದ್ದನೆಂದಾದರೆ ಆತನ ಕಾಲ ಸುಮಾರು ೧೧೦೦ ಆಗುವದು. ಈ ಘಟನೆಯಿಂದ ಬೊಮ್ಮಣ್ಣ ಶಂಕರದಾಸಿ ಮಯ್ಯನ ಕಿರಿಯ ಸಮಕಾಲೀನನೆಂದು ವ್ಯಕ್ತವಾಗುವದು. ಅದಲ್ಲದೆ ಈತನ ಒಂದು ವಚನವು ಈತ ಬಸವಣ್ಣನವರ ಹಿರಿಯ ಸಮಕಾಲೀನನಾಗಿದ್ದನೆಂಬುದಕ್ಕೆ ಆಧಾರವಾಗಿದೆ.

ಭಕ್ತಸ್ಥಲ ಸಂಗನ ಬಸವಣ್ಣಂಗಾಯಿತ್ತು.
ಮಾಹೇಶ್ವರ ಸ್ಥಲ ಮಡಿವಾಳಯ್ಯಂಗಾಯಿತ್ತು.
ಪ್ರಸಾದಿಸ್ಥಲ ಚೆನ್ನಬಸವಣ್ಣಂಗಾಯಿತ್ತು.
ಪ್ರಾಣಲಿಂಗಸ್ಥಲ ಚಂದಯ್ಯಂಗಾಯಿತ್ತು.
ಶರಣಸ್ಥಲ ಘಟ್ಟಿವಾಳಯ್ಯಂಗಾಯಿತ್ತು.
ಐಕ್ಯಸ್ಥಲ ಅಜಗಣ್ಣಂಗಾಯಿತ್ತು
ಇಂತೀಷಡುಸ್ಥಲ ಬ್ರಹ್ಮಂಗಳೆಲ್ಲವು
ಎನ್ನಂಗದ ಮೊಳಿದ ಮಾರಿಯಲ್ಲಿ ಸಂಗಾತಲಿದಾವೆ.
ಆಚಿಂಗದ ಮಾಳಿಯ ಸಂಗದ ತೋಳಿಕೆಯ ತೋಳಿ,
ಕಾಲಾಂತಕ ಭೀಮೇಶ್ವರಲಿಂಗವೇ

ಈ ವಚನದಲ್ಲಿ ಢಕ್ಕೆಯ ಬೊಮ್ಮಣ್ಣ, ಬಸವಣ್ಣ ಹಾಗೂ ಚೆನ್ನಬಸವಣ್ಣನನ್ನು ನೆನೆಯುವನು. ಬಸವಣ್ಣ, ಚೆನ್ನಬಸವಣ್ಣ, ಮಡಿವಾಳಯ್ಯರನ್ನು ಕಂಡು ಒಡನಾಡಿಯೇ ಆತ ಈ ವಚನ ರಚಿಸಿರಬೇಕು. ಅಂದಾಗ ಬಸವಣ್ಣನಿಗೆ ಈತ ಹಿರಿಯ ಸಮ

೧ ಡಾ॥ ಆರ್. ಸಿ. ಹಿರೇಮಠ (ಸಂ) : ಸಕಲ ಪುರಾತನರ ವಚನಗಳು ಪುಟ ೨೨೫, ವಚನ ೨೮ ಈ ಕೃತಿಯಲ್ಲಿ ಉದಾಹರಿಸಿರುವ ಎಲ್ಲ ವಚನಗಳು ಈ ಕೃತಿಯಿಂದಲೇ ಬಂದಿವೆ.

ಕಾಲೀನನಾಗುವನೆಂಬುದು ಸ್ಪಷ್ಟವಾಗುವದು. ಇಷ್ಟಲ್ಲದೆಯೆ ಈ ಶಂಕರದಾಸಿಮಯ್ಯನಿಗೆ ಕಿರಿಯ ಸಮಕಾಲೀನನಾಗುವನನು. ಇಬ್ಬರು ಮಹಾನ್ ಜೀವಿಗಳನ್ನು ಕಂಡ ಪುಣ್ಯಪುರುಷ ಈತ.

ಅದಲ್ಲದೆ ಈ ಅಹಂಕಾರ ಕಳೆಯುವ ಘಟನೆ ನಡೆದಾಗ ಅಲ್ಲಿ ಬಸವಣ್ಣ ಉಪಸ್ಥಿತನಿದ್ದನೆಂದೂ, ಆಗ ಆತ ವಚನವೊಂದನ್ನು ಉಗ್ಗಡಿಸಿದನೆಂದೂ ಈ ಘಟನೆಯು ಕಲ್ಯಾಣದಲ್ಲಿ ನಡೆಯಿತೆಂದೂ ಕೆಲ ಕಾವ್ಯಗ್ರಂಥಗಳಲ್ಲಿ ವರ್ಣಿತವಾಗಿದೆ.[೨] ಆದರೆ ಇದು ತಪ್ಪು. ಬಿ. ಎಸ್ ಸಣ್ಣಯ್ಯನವರು ತಮ್ಮ "ಶಿವಲೆಂಕ ಮಂಚಣ್ಣ ಮತ್ತು ಢಕ್ಕೆಯ ಬೊಮ್ಮಣ್ಣಗಳ ವಚನಗಳು" ಎಂಬ ಪುಸ್ತಕದಲ್ಲಿ ಢಕ್ಕೆಯ ಬೊಮ್ಮಣ್ಣ ಬಸವನಿಗಿಂತ ನೂರುವರ್ಷ ಮೊದಲೇ ಇದ್ದರೆಂದು ಹೇಳಿದ್ದಾರೆ. ಈ ಹೇಳಿಕೆಯೂ ತಪ್ಪಾಗಿದೆ.

ಈಗ ಉಪಲಬ್ಧವಿರುವ ಆಧಾರಗಳಿಂದ ಬೊಮ್ಮಣ್ಣನ ಕಾಲವನ್ನು ಕ್ರಿ. ಶ. ೧೧೦೦ರಿಂದ ಕ್ರಿ. ಶ. ೧೧೬೨ರವರೆಗೆ ಎಂದು ನಿರ್ಣಯಿಸಬಹುದು.

---

೨ (i) ಅದೃಶ್ಯಕವಿ : ಪ್ರೌಢರಾಯಕಾವ್ಯ.
(ii) ಶಾಂತಲಿಂಗದೇಶಿಕ : ಭೈರವೇಶ್ವರ ಕಾವ್ಯಕಥಾಮಣಿ ಸೂತ್ರರತ್ನಾಕರ

ಚರಿತ್ರೆ

ಢಕ್ಕೆಯ ಬೊಮ್ಮಣ್ಣನ ಚರಿತ್ರೆಯನ್ನು ನೋಡಿದಾಗ ಆ ಬಗೆಗೆ ಹೆಚ್ಚು ವಿವರಗಳು ಸಿಗುವದಿಲ್ಲ. ಕಾಲನಿರ್ಣಯಕ್ಕೆ ಸಿಕ್ಕ ಘಟನೆಯೊಂದರಿಂದಲೇ ಈತನ ಚರಿತ್ರೆಯನ್ನು ತಿಳಿಯಲು ಪ್ರಯತ್ನಿಸಬೇಕು. ಶಂಕರದಾಸಿಮಯ್ಯನ ಅಹಂಕಾರವನ್ನು ಕಳೆದದ್ದು ಜಿತಾಪುರ ಸಪಿಲೆಯಲ್ಲೆ ಆಗಿರಬೇಕು. ಏಕೆಂದರೆ ಶಂಕರದಾಸಿಮಯ್ಯ ಸ್ಕಂದಶಿಲೆಯನ್ನು ತೊರೆದು ತನ್ನ ಕೊನೆಗಾಲದವರೆಗೆ ಇಲ್ಲಿಯೇ ನೆಲೆಸಿದ್ದನು. ಆದ್ದರಿಂದ ಬೊಮ್ಮಣ್ಣನು ಈ ಊರಿನವನೆಂದೂ ಇಲ್ಲವೆ ಸುತ್ತಮುತ್ತಿನ ಊರಿನವರಾಗಿರಬೇಕೆಂದೂ ಊಹಿಸಬಹುದಾಗಿದೆ. ಈ ಘಟನೆಯ ವಿವರವನ್ನು ನೋಡಿದಾಗ ಎಲ್ಲಿ ಕಾವ್ಯ ಹಾಗೂ ಗ್ರಂಥಗಳಲ್ಲಿ ಯಾವ ಊರು ಏನು ಎಂಬ ವಿವರವಿರದೆಯೇ ಕೇವಲ, "ಒಂದು ದಿವಸ ಢಕ್ಕೆಯ ಬೊಮ್ಮಣ್ಣ ಮಾರಿಯನ್ನು ಹೊತ್ತುಕೊಂಡು ಶಂಕರದಾಸಿಮಯ್ಯನ ಅಂಗಣಕ್ಕೆ ಬಂದನು" ಎಂದು ಆರಂಭವಾಗುವದು. ಇದರಿಂದ ಮೇಲೆ ಹೇಳಿದಂತೆ ಸಪಿಲೆಯೇ ಅಥವಾ ಅದರ ಸುತ್ತಮುತ್ತಿನ ಯಾವುದಾದರೊಂದು ಗ್ರಾಮ ಇವನ ಊರಾಗಿರಬಹುದೆಂದು ಊಹಿಸಬಹುದಾಗಿದೆ.

ಈತನ ಕಾಯಕವೆಂದರೆ ಮನೆಮನೆಗೆ ಮಾರಿಯನ್ನು ಹೊತ್ತುಕೊಂಡು ಹೋಗಿ ಕುಣಿಸುವುದು; ಜೊತೆಗೆ ಜನರಿಗೆ ಶಿವಾನುಭವವನ್ನೂ ಪುರಾತನರ ತತ್ವಗಳನ್ನೂ ನೀತಿ ಸದಾಚಾರವನ್ನೂ ಭೋಧಿಸುವುದು.

ಬೊಮ್ಮಣ್ಣನ ವೈಯಕ್ತಿಕ ಬದುಕಿನತ್ತ ಇಣಿಕಿದಾಗ ಅಲ್ಲಿ ಏನೂ ಗೋಚರಿಸುವದಿಲ್ಲ. ಈತ ಮದುವೆ ಆಗಿದ್ದನೋ ಇಲ್ಲವೋ ತಿಳಿಯದು. ಈಗ ಸಾಮಾನ್ಯವಾಗಿ ಮಾರಿಯನ್ನು ಕುಣಿಸಲು ಒಂದು ಗಂಡು, ಒಂದು ಹೆಣ್ಣು ಇಬ್ಬರೂ ಜೊತೆಗೂಡಿ ಬರುವ ದುಂಟು. ಆದರೆ ಬೊಮ್ಮಣ್ಣನ ವೃತ್ತಿಯ ಬಗ್ಗೆ ಬರುವ ವಿವರ ಗಳಲ್ಲಿ 'ಇನ್ನೊಬ್ಬ' ಯಾರ ಮಾತೂ ಬರದು. ಅಥವಾ ಆತ ಮದುವೆ ಆಗಿದ್ದು, ತಾನೊಬ್ಬನೇ ಕಾಯಕ ಮಾಡಲು ಹೋಗು ತ್ತಿದ್ದನೋ ಏನೊ? ಯಾವುದೂ ತಿಳಿಯದು.

ಕಾರಣ ಈತನ ಚರಿತ್ರಾಂಶಗಳು ಎಲ್ಲಿಯೂ ಸಿಗುವದಿಲ್ಲ ವಾದ್ದರಿಂದ ಹೆಚ್ಚಿನ ಊಹೆಗೆ ಅವಕಾಶವಿಲ್ಲ.

ಹೆಸರು

ಢಕ್ಕೆಯ ಬೊಮ್ಮಣ್ಣನಿಗೆ ಎರಡು ಹೆಸರುಗಳಿವೆ. ಒಂದು ಢಕ್ಕೆಯ ಬೊಮ್ಮಣ್ಣ. ಇನ್ನೊಂದು ಢಕ್ಕೆಯ ಮಾರಯ್ಯ. ಹೆಸರು ಗಳು ಎರಡಾದರೂ ವ್ಯಕ್ತಿ ಒಬ್ಬನೇ ಎಂದು ಆಧಾರಗಳಿಂದ ನಿರ್ಧರಿಸಬಹುದು. ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಪುರಾಣದಲ್ಲಿ "ಪರದೈವಭಂಜಕನೆಂಬಹುಂಕಾರವನ್ನು ಮುರಿದವ ಮೊರದಲ್ಲಿ ಮಾರಿಯನ್ನು ತರುವ ಢಕ್ಕೆಯ ಮಾರಯ್ಯ" ನೆಂದಿದೆ. ಅದೃಶ್ಯಕವಿಯ ಪ್ರೌಢದೇವರಾಯನ ಕಾವ್ಯದಲ್ಲಿ ಶಂಕರದಾಸಿ ಮಯ್ಯನ ಅಹಂಕಾರವನ್ನು ಕಳೆದವನು ಡಕ್ಕೆಯ ಮಾರಿದೇವ

ನೆಂದಿದೆ. ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯ ಕಥಾಮಣಿ ಸೂತ್ರರತ್ನಾಕರದಲ್ಲಿ "ಗುರುಮೊದಲಾದಷ್ಟಾವರಣವ ಬಿಡ ಬೇಡವೆಂದು ಸಾರಿದ ಢಕ್ಕೆಯು ಮಾರಯ್ಯ" ನೆಂದಿದೆ. ಕಿಕ್ಕೇರಿ ಆರಾಧ್ಯ ನಂಜುಂಡನ ಭೈರವೇಶ್ವರ ಕಾವ್ಯದಲ್ಲಿ ಶಂಕರದಾಸಿ ಮಯ್ಯನ ಅಹಂಕಾರ ಕಳೆದವನು ಢಕ್ಕೆಯು ಬ್ರಹ್ಮದೇವನೆಂದಿದೆ. ಎಳಂದೂರಿನ ಹರೀಶ್ವರನ 'ಪ್ರಭುದೇವಪುರಾಣ'ದಲ್ಲಿ ಢಕ್ಕೆಯ ಮಾರಯ್ಯನೆಂದಿದೆ. ಢಕ್ಕೆಯ ಬೊಮ್ಮಣ್ಣ ತನ್ನ ವಚನವೊಂದ ರಲ್ಲಿ ಹೀಗೆ ಹೇಳಿದ್ದಾನೆ.

> ಕವಿಯು ಹುಗತೆ, ಗಮಕಿಯು ಸಂಚ, ವಾದಿಯು ಚೊಕ್ಕಹ,
> ವಾಗ್ಮಿಯು ಚೇತನ,
> ಇಂತೀ ಚತುಷ್ಟಯದಲ್ಲಿ ಯುಕ್ತಿವಂತನಾದಡೇನು?
> ಭಕ್ತಿಯನಱಿಯಬೇಕು. ಸತ್ಯದಲ್ಲಿ ನಡೆಯಬೇಕು,
> ವಿರಕ್ತಿಯಲ್ಲಿ ವಿಚಾರಿಸಿ ನಿಲ್ಲಬೇಕು.
> ಈ ಗುಣ ಢಕ್ಕೆಯ ಬೊಮ್ಮನ ಭಕ್ತಿ.
> ಕಾಲಾಂತಕ ಭೀಮೇಶ್ವರಲಿಂಗವನಱಿವವನ ಸದ್ಭಕ್ತಿಯ
> ಯುಕ್ತಿ.

ಎಂದು ತನ್ನ ಹೆಸರನ್ನು ಢಕ್ಕೆಯ ಬೊಮ್ಮನೆಂದು ಹೇಳುವನು. ವಚನಗಳ ಹಸ್ತಪ್ರತಿಗಳಲ್ಲೆಲ್ಲ ಢಕ್ಕೆಯ ಬೊಮ್ಮನೆಂದೇ ಸಿಗುವದು. ಹಳಗನ್ನಡ ಕಾವ್ಯಗಳಲ್ಲಿ ಮತ್ತು ವಚನದ ಹಸ್ತಪ್ರತಿಯಲ್ಲಿ ದೊರ ಕುವ ಮಾರಯ್ಯ ಮತ್ತು ಬೊಮ್ಮಯ್ಯನೆಂಬ ಹೆಸರುಗಳು ಬೇರೆ ಯಾದರೂ 'ಢಕ್ಕೆಯ' ಎಂಬುದು ಮಾತ್ರ ಎರಡರಲ್ಲೂ ಇದೆ. ಅಲ್ಲದೆ ಢಕ್ಕೆಯ ಬೊಮ್ಮಣ್ಣನ ವಚನಗಳಲ್ಲಿ ಆತ ದೊರದಲ್ಲಿ

ಮಾರಿ ತರುವದು, ಢಕ್ಕೆ ಬಾರಿಸುವದು, ಮಾರಿದೇವತೆಯನ್ನು ಪೂಜಿಸುವದು ಮುಂತಾದವು ಹಳಗನ್ನಡ ಕಾವ್ಯಗಳಲ್ಲಿಯೂ ಆತನ ಬಗ್ಗೆ ಬರುವ ವೃತ್ತಾಂತಗಳಲ್ಲೂ ಒಡಮೂಡಿವೆ. ಢಕ್ಕೆಯ ಬೊಮ್ಮಯ್ಯ ತನ್ನ ಹೆಸರನ್ನು ತಾನೇ ವಚನದಲ್ಲಿ ಹೇಳಿರುವದರಿಂದ ಆತನ ನಿಜ ನಾಮಧೇಯ ಅದೇ ಆಗಿರಬೇಕು. ಆದರೆ ಈ ಮಾರಯ್ಯನೆಂಬ ಹೆಸರು ಹೇಗೆ ಬಂದಿತೆಂಬುದರಲ್ಲಿ ಸಂಶಯ ಉದ್ಭವಿಸುವದು. ಬೊಮ್ಮಣ್ಣ ಕೈಕಾಲುಗಳಿಗೆ ಬೇವಿನ ಎಲೆ ಕಟ್ಟಿಕೊಂಡು ಮೊರದಲ್ಲಿ ಮಾರಿಯನ್ನಿಟ್ಟು ಕುಣಿಸಿ ಜನರನ್ನು ರಂಜಿಸುವದರ ಜೊತೆಗೆ ಅನುಭಾವವನ್ನು ಸಾರುವ ಕಾಯಕ ಕೈಕೊಂಡಿದ್ದನು. ಈ ಮಾರಿ ಕುಣಿಸುವ ಕಾಯಕದಿಂದ ಆತನಿಗೆ ಅನ್ವರ್ಥಕವಾಗಿ ಮಾರಯ್ಯನೆಂಬ ಹೆಸರು ಬಂದಿರಬೇಕು. ಹಾಗೂ ಭೈರವೇಶ್ವರ ಕಾವ್ಯದಲ್ಲಿ ಬರುವ ಮಾರಯ್ಯನೇ ಢಕ್ಕೆಯ ಬೊಮ್ಮಣ್ಣನೇ ಹೊರತು ಬೇರೆ ಯಾರೂ ಅಲ್ಲ. ಈ ಎಲ್ಲ ಆಧಾರಗಳಿಂದ ಢಕ್ಕೆಯ ಬೊಮ್ಮಣ್ಣ ಹಾಗೂ ಮಾರಯ್ಯನೆಂಬ ಎರಡು ಹೆಸರುಗಳು ಆತನಿಗೆ ಇದ್ದುವೆಂಬುದು ತಿಳಿಯುತ್ತದೆ. ಆದ್ದರಿಂದ ಹೆಸರಷ್ಟೇ ಬೇರೆ ಬೇರೆ, ವ್ಯಕ್ತಿ ಮಾತ್ರ ಒಂದೇ ಎಂದು ತಿಳಿಯಬೇಕು.

ದುರುಗ ಮುರಿಗಿ

ಕಾಯಕ ತತ್ತ್ವವು ಶರಣರು ಜಗತ್ತಿಗೆ ಇತ್ತ ಅಪೂರ್ವ ಕಾಣಿಕೆಯಾಗಿದೆ. ಈ ಒಂದು ತತ್ತ್ವದ ನಿಜವಾದ ಆಚರಣೆಯಾದರೆ ಜಗದಲ್ಲಿ ಸುಖಶಾಂತಿ ನೆಲೆಸುವದು ಅಸಾಧ್ಯವಾದ ಮಾತೇನಲ್ಲ.

ಪ್ರತಿಯೊಬ್ಬನೂ ತನ್ನ ಅನ್ನವನ್ನು ತಾನು ಸಂಪಾದಿಸಬೇಕು. ಭಿಕ್ಷಾವೃತ್ತಿಯನ್ನು ಶರಣರು ಖಂಡಿಸಿದ್ದಾರೆ. ದೈಹಿಕ ಶ್ರಮವಿಲ್ಲದೆಯೇ ಬದುಕುವ ಹಕ್ಕು ಯಾರಿಗೂ ಇಲ್ಲ. ದುಡಿಯುವ ಭಾರ ಒಬ್ಬನಿಗೆ. ತಿನ್ನುವ ಫಲ ಹಲವರಿಗೆ ಆಗಬಾರದು. ತನ್ನ ಕೆಲಸಗಳನ್ನು ತಾನೇ ಮಾಡಿಕೊಳ್ಳಬೇಕು. ಆಗ ಸಮಾಜ ಸ್ವಾವಲಂಬಿಯಾಗುವದು.

ಈ ಕಾಯಕದಲ್ಲಿ ಮೇಲು ಕೀಳುಗಳಿಲ್ಲ; ಅಂತಸ್ತು ವರ್ಗಗಳಿಲ್ಲ. ಜಾತಿವರ್ಣಗಳಿಲ್ಲ. ಸಣ್ಣ ಕಾಯಕಗಳನ್ನು ಕೀಳು ಕುಲದವರು, ಬಡವರು ಮಾಡಬೇಕು; ಒಳ್ಳೆ ಕಾಯಕಗಳನ್ನು ದೊಡ್ಡ ಕುಲದವರು, ಶ್ರೀಮಂತರು ಮಾಡಬೇಕು ಎಂಬ ಹೀನ ಮನೋವೃತ್ತಿಯನ್ನು ಶರಣರು ಖಂಡಿಸಿದ್ದಾರೆ. ಕಾಯಕ ಯಾವುದೇ ಆಗಿರಬಹುದು. ಅದನ್ನು ಮೇಲು ಕೀಳೆಂದು ತಿಳಿಯಕೂಡದು-ಮೇಲು-ಕೀಳು,ಜಾತಿ. ಕುಲಗಳು ಕಾಯಕದಲ್ಲಿಲ್ಲ. ಕಾಯಕಗಳೆಲ್ಲ ಯಾವಾಗಲೂ ಪವಿತ್ರವಾದವುಗಳು. ಮೇಲು-ಕೀಳು ಎಂಬುದು ಜನರ ಮನೋಭಾವದಲ್ಲಿದೆ. ಆ ಮನೋಭಾವ ಬದಲಾದರೆ ಸಮಾಜದಲ್ಲಿ ಪ್ರತಿಯೊಬ್ಬನೂ ದುಡಿದು ತಿನ್ನುವವನಾಗಿ ಸಮಾಜ ಸತ್ವಪೂರ್ಣವಾಗುವದು.

ಕಾಯಕದಲ್ಲಿ ಪ್ರಾಮಾಣಿಕತೆ. ನಿಷ್ಠೆ ಇರಬೇಕು. ಕಾಯಕವನ್ನು ಪ್ರೀತಿಸಬೇಕು. ಅಲ್ಲಿ ಸೋಮಾರಿತನಕ್ಕೆ ಅವಕಾಶವಿಲ್ಲ. ಅಂದಾಗಲೇ ಸಮಾಜದಲ್ಲಿಯ ಭ್ರಷ್ಟಾಚಾರ, ಅಪ್ರಾಮಾಣಿಕತೆ ಮಾಯವಾಗಿ ಸಮಾಜ ಆರೋಗ್ಯಶಾಲಿಯಾಗುವದು.

ಧಕ್ಕಯ್ಯ ಬೊಮ್ಮಣ್ಣನೂ ಕಾಯಕವನ್ನೇ ತನ್ನ ಬದುಕಿನಲ್ಲಿ ಅಳವಡಿಸಿಕೊಂಡಿದ್ದನು. ಆತನ ಕಾಯಕ ದುರಗ ಮುರಗಿ, "ದುರಗ

ಮುರಿಗಿ" ಯನ್ನು ಈಗಲೂ ಕಾಣಬಹುದು. ಕೈಕಾಲುಗಳಿಗೆ, ಟೊಂಕಕ್ಕೆ ಬೇವಿನೆಲೆಯನ್ನು ಕಟ್ಟಿಕೊಂಡು, ಗಂಡು-ಹೆಣ್ಣು ಇಬ್ಬರಾಗಿ ಬರುವರು. ಹೆಣ್ಣು ಮೊರದಲ್ಲಿ ಮಾರಿಯನಿಟ್ಟು ಅದನ್ನು ತಲೆಯ ಮೇಲೆ ಹೊತ್ತುಕೊಂಡು. ಕೈಯಲ್ಲಿ ಢಕ್ಕೆಯನ್ನೋ, ಢೋಲನ್ನೋ ಭಾರಿಸುತ್ತಿರುವಳು. ಗಂಡಸು ಉದ್ದನೆಯ ಬಾರು ಕೋಲನ್ನು ಹಿಡಿದುಕೊಂಡು ಮೈಗೆ ಚಟಚಟಾರನೆ ಬಡಿದು ಕೊಳ್ಳುವನು; ಕುಣಿ ಕುಣಿದು ಭಿಕ್ಷೆ ಕೇಳುವನು.

ದುರುಗಮುರಗಿಯರಿಗೆ ಬುರುಬುರು ಸುಂಕಲಮ್ಮ ಎಂದೂ ಕರೆಯುವರು. ಇದೊಂದು ಜಾನಪದ ಕಲೆ ಜನರಂಜನೆ ನೀಡುತ್ತ ಹೊಟ್ಟೆ ಹೊರೆಯುವುದೇ ಇದರ ಮೂಲ ಉದ್ದೇಶ. ಇದು ಜಾನ ಪದ ಕಲೆಯಾದರೂ ಈಗದು ಭಿಕ್ಷಾವೃತ್ತಿಗೆ ಇಳಿದಿದೆ. ಇದನ್ನೀಗ ಕೀಳು ಕಲೆಯೆಂದು ಭಾವಿಸಲಾಗಿದೆ. ಈ ದುರುಗಮುರಿಗೆಯ ಜನಾಂಗ ಈಗ ಕಡಿಮೆಯಾಗಿದ್ದು ಆಗೊಮ್ಮೆ ಈಗೊಮ್ಮೆ ಕಾಣ ಸಿಗುವುದು. ಈಗ ನಾವು ಕೀಳೆಂದು ತಿಳಿದಿರುವ ಈ ಕಲೆಯನ್ನು ಆಗ ಢಕ್ಕೆಯ ಬೊಮ್ಮಣ್ಣ ತನ್ನ ಕಾಯಕವನ್ನಾಗಿ ಮಾಡಿಕೊಂಡಿ ದ್ದನು. ಆದರೆ ಈಗಿನ ಸ್ಥಿತಿಗೂ. ಆಗಿನ ಸ್ಥಿತಿಗೂ ಬಲು ಅಂತರ ಇದೆ. ಢಕ್ಕೆಯ ಬೊಮ್ಮಣ್ಣ ಇಂತಹ ಕಾಯಕವನ್ನೇಕೆ ಕೈಗೊಂಡಿ ದ್ದನೊ? ಮೊದಲೇ ಹೇಳಿದಂತೆ ಶರಣರು ಕಾಯಕದಲ್ಲಿ ಮೇಲು ಕೀಳೆಂದೆಣಿಸಲಿಲ್ಲ. ಅಲ್ಲದೆ ಅವರು ಮಾಡಿದ ಮತ್ತೊಂದು ಮಹತ್ವದ ಕೆಲಸವೆಂದರೆ. ಜನಪದ ಸಣ್ಣ ಸಣ್ಣ ಕಲೆಗಳನ್ನೆಲ್ಲ ಕಾಯಕದ ಮಟ್ಟಕ್ಕೇರಿಸಿ ಅವನ್ನೆಲ್ಲ ಉದಾತ್ತೀಕರಿಸಿದುದು. ಇದ ರಿಂದ ಇಹಪರಗಳೆರಡನ್ನು ಸಾಧಿಸುವದು ಸಾಧ್ಯವಾಯಿತು.

ಇಂಥ ಕಲೆಗಳ ಕಾಯಕದಿಂದ ಲಿಂಗಾಂಗ ಸಾಮರಸ್ಯ ಸಾಧಿಸಿದ ಅನೇಕ ಶರಣರನ್ನು ನಾವು ಕಾಣುತ್ತೇವೆ. ಸಕಲೇಶ ಮಾದರಸ ವೀಣೆ ನುಡಿಸುತ್ತಿದ್ದನು. ರಾಗದ ಸಂಕಣ್ಣ ಸಂಗೀತಗಾರ. ಆತನಿಗೆ ರಾಗರ ಸಾಂಕನೆಂಬ ಬಿರುದು ಬಂದಿತ್ತು. ಕುಂಬಾರ ಗುಂಡಯ್ಯ ತಾನು ಮಾಡಿದ ಮಡಕೆ ಬಾರಿಸಿ ಕುಣಿಯುತ್ತಿದ್ದನು. ನಗೆಮಾರಿ ತಂದೆ ಕಥೆ ಹೇಳಿ ನಗಿಸುತ್ತಿದ್ದನು. ಬಹುರೂಪಿ ಚೌಡಯ್ಯ ನಟ್ಯ ವರ್ಯನಾಗಿದ್ದನು. ಕಲಕೇತಿ ಬೊಮ್ಮಯ್ಯ ಕೋಡಂಗಿಯಾಟ ಆಡುತ್ತಿದ್ದನು. ಕಂಕರೀ ಕಕ್ಕಯ್ಯ ಕಂಕರೀವಾದ್ಯ ಬಾರಿಸುತ್ತಿದ್ದನು. ವೀರದೇವಮ್ಮ ವಚನಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದಳು. ಸಿದ್ದದೇವಮ್ಮ ಜಾನಪದನಾಟ್ಯ ಪ್ರವೀಣೆ: ಶಿವಮಾಯಿದೇವಿ ಪುರಾಣ ಕಥೆ ಹೇಳುವದರಲ್ಲಿ ಸಿದ್ಧಹಸ್ತಳು. ಬಯಲಾಟ,ಡೊಂಬ ರಾಟ. ಜಾತಿಗಾರಾಟ. ಕಿಳ್ಳಿಕೇತಿಗರ ಆಟ. ಛ್ರಂಗಿಕುಣಿತ, ದುರುಗ ಮುರಗಿ, ಚೌಡಿಕೆ ಬಾರಿಸುವದು, ಕಥೆ ಪುರಾಣ ಹೇಳುವದು, ತೊಗಲುಗುಪ್ಪಿಯಾಟ ಮುಂತಾದುವೆಲ್ಲ ಶುದ್ಧ ಜಾನಪದ ಕಲೆಗಳು; ಉಳಿದ ಕಲೆಗಳಿಗೆ ಇವು ಮೂಲ ನೆಲೆಯಾದವು. ಇವು ಹೊಟ್ಟೆ ಹೊರೆಯಲು ಸಾಧನವಾಗಿದ್ದು ವೈದಿಕರ ದೃಷ್ಟಿಯಲ್ಲಿ ಕೀಳೆನಿಸಿ, "ಶೂದ್ರತನದ ಸ್ಥಾನವನ್ನು" ಪಡೆದಿದ್ದವು. ಇಂಥ ಶುದ್ಧ ಕಲೆಗಳನ್ನು ಶರಣರು ಕಾಯಕವನ್ನಾಗಿ ಮಾಡಿಕೊಂಡು, ಅವುಗಳನ್ನು ಉನ್ನತೀಕರಿಸಿ ಹೊಸ ಬೆಳಕನ್ನು ಕೊಟ್ಟರು. ಈ ಕಲೆಗಳನ್ನು ಉದ್ಧರಿಸಿದ ಶರಣರಲ್ಲಿ ಢಕ್ಕೆಯ ಬೊಮ್ಮಣ್ಣನೂ ಒಬ್ಬನು.

ಒಂದೆಯೇ ಹೇಳಿದಂತೆ ಬೊಮ್ಮಣ್ಣ ದುರುಗಮುರಿಗೆಯ ಕಾಯಕ ಕೈಕೊಂಡಿದ್ದನು. ಕೈಕಾಲು ಟೊಂಕಗಳಿಗೆ ಬೆವಿನಲೆ

ಯನ್ನು ಕಟ್ಟಿಕೊಂಡು, ಎಡಗೈಯಲ್ಲಿ ಮಾರಿಯ ಮೊರವನ್ನು ಹಿಡಿದು, ಬಲಗೈಯಲ್ಲಿ ಢಕ್ಕೆಯನ್ನು ಬಾರಿಸುತ್ತ ಮನೆಮನೆಗೆ, ಓಣಿಓಣಿಗೆ. ಹೋಗಿ ಮಾರಿಯನ್ನು ಆಡಿಸಿ ಕುಣಿಸುತ್ತಿದ್ದನು. ಪುರಾತನರ ತತ್ವ ಹೇಳುತ್ತಿದ್ದನು ವಚನಗಳನ್ನು ಹಾಡುತ್ತಿದ್ದನು. ಜನರಿಗೆ ನೀತಿ, ವಿನಯ ಸದಾಚಾರ ತತ್ವವನ್ನು ಮನಮುಟ್ಟುವಂತೆ ಹೇಳುತ್ತಿದ್ದನು. ಸಮಾಜದ ಓರೆಕೋರೆಗಳನ್ನು, ಅಂಕುಡೊಂಕನ್ನು ಬಯಲಿಗೆ ಹಾಕಿ ಉದ್ಧಾರವಾಗುವ ರೀತಿಯನ್ನು ತಿಳಿಸುತ್ತಿದ್ದನು. ಸದಾ ಜನರಲ್ಲಿ ಬೆರೆತು, ಅವರಲ್ಲಿ 'ಶಿವನನ್ನು' ಬಿತ್ತಿ ಬೆಳೆಯುತ್ತಿದ್ದನು. ಜನರು ಪ್ರತ್ಯೇಕವಾಗಿ ಪುರಾಣ, ಪುಣ್ಯ ಕಥೆಗಳಿಗೆ ಹೋಗಿ ಉದ್ಧಾರಮಾಡಿಕೊಳ್ಳುವ ಶ್ರಮವೂ ಪ್ರಮೇಯವೂ ಇರಲಿಲ್ಲ. ಬೊಮ್ಮಣ್ಣನೇ ಪುರಾಣ. ಪುಣ್ಯ ಕಥೆಗಿಂತ ಮಿಗಿಲಾಗಿ ಜನರ ಕಣ್ಣನ್ನು ತೆರೆಯಿಸುತ್ತಿದ್ದನು. ಹೃದಯದ ಬಾಗಿಲು ಬಡಿದು, ಮನೆಯೊಳಗೆ ಮನೆಯೊಡೆಯನು ಇದ್ದಾನೋ ಇಲ್ಲವೋ ಎಂದು ಕೇಳಿ ಎಚ್ಚರಿಸುತ್ತಿದ್ದನು. ಅಂತೆಯೇ "ಅತ ಸ್ವಂತಕ್ಕೆ ಒಂದು ನಡೆದಾಡುವ ಶಿವಾನುಭವ ಸಂಸ್ಥೆಯಾಗಿದ್ದನು"[೧] ಎಂಬ ಮಾತು ಬಹು ಅರ್ಥಪೂರ್ಣವಾಗಿದೆ. ತನ್ನ ಕಾಯಕಕ್ಕೆ ಪ್ರತಿಯಾಗಿ ತನಗೆ ಅವಶ್ಯವಿದ್ದಷ್ಟನ್ನು ಮಾತ್ರ ತೆಗೆದುಕೊಳ್ಳುತ್ತಿದ್ದನು.

ಒಂದುದಿನ, ಬೊಮ್ಮಣ್ಣ ಢಕ್ಕೆ ಬಾರಿಸುತ್ತ ಮಾರಿಯನ್ನು ಕುಣಿಸುತ್ತ, ಶಂಕರದಾಸಿಮಯ್ಯನ ಅಂಗಣಕ್ಕೆ ಬಂದನು. ಶಂಕರದಾಸಿಮಯ್ಯ ಆ ಕಾಲದ ಮಹಾಶರಣ. ಅತ ಮಕ್ಕಣ್ಣನಿಂದ ಹಣೆಗಣ್ಣ ಪಡೆದಿದ್ದನು. ಕೀಳುದೈವಗಳಾದ ಮಾರಿಮಸಣಿಯ

---

೧ ಶಾಂತರಸ : ಬಸವಪೂರ್ವಯುಗದ ಶರಣರು ಪುಟ-೩೦

ರನ್ನು ಸುಡುತ್ತಿದ್ದನು. ಕ್ಷುಲಕ ದೈವಾರಾಧನೆಯನ್ನು ಖಂಡಿಸುತ್ತಿದ್ದನು. ಅಷ್ಟೇ ಅಲ್ಲದೆ ಅವುಗಳಿಂದ ಸೇವಿಸಿಕೊಳ್ಳುತ್ತಿದ್ದನು. ಇಂಥವನ ಮನೆಯ ಅಂಗಳಕ್ಕೆ ಬರಬೇಕೆ ಮಾರಿಹೊತ್ತ ಬೊಮ್ಮಣ್ಣ? ಬೊಮ್ಮಣ್ಣ ಯಥಾಪ್ರೀತಿ ಮಾರಿಯನ್ನು ಕುಣಿಸಿ ಇಳುಹಿ "ಮರಕ್ಕೆ ಮೊರಕೊಡಿರಿ" ಎಂದು ಕೇಳಿದನು. ತನ್ನ ಮನೆ ಹೊರಗೆ ಮಾರಿಬಂದಿದೆ ಎಂಬ ಸುದ್ದಿ ಕೇಳಿಯೇ ಕಿಡಿಕಿಡಿಯಾದ ಶಂಕರ ದಾಸಿಮಯ್ಯನು ಸಿಟ್ಟಿನಿಂದ ಅಂಗಳಕ್ಕೆ ಬಂದವನೇ ಮಾರಿಯನ್ನು ಸುಡಲು ದಾವಾಗ್ನಿಯಂತಿರುವ ತನ್ನ ಹಣೆಗಣ್ಣನ್ನು ತೆರೆದನು. ಆದರೆ ಆದದ್ದೇನು ? ಹಣೆಗಣ್ಣು ಮಾರಿಯನ್ನು ಸುಡಲಿಲ್ಲ ! ಬದಲಾಗಿ ಮಾರಿಯೇ ಆ ಹಣೆಗಣ್ಣನ್ನು ನುಂಗಿಬಿಟ್ಟಿತು. ಶಂಕರ ದಾಸಿಮಯ್ಯ ಒಂದು ಕ್ಷಣ ಪೆಚ್ಚಾದನು. ನೆರೆದ ಜನರೆಲ್ಲ ಬೆರಗಾದರು. ಬೊಮ್ಮಣ್ಣನ ತುಟಿಗಳಲ್ಲಿ ನಸುನಗೆ ಮೂಡಿತ್ತು. ಏನೂ ತಿಳಿಯದೆಯೇ ನಿಂತಿದ್ದ ಶಂಕರದಾಸಿಮಯ್ಯನಿಗೆ ನಗುತ್ತ ಹೀಗೆಂದನು: "ನನ್ನ ಮಾರಿ ನೀನು ತಿಳಿದಂತೆ ಬಲಿಬೇಡುವ ಮಾರಿಯಲ್ಲ. ಆಕೆ ನನ್ನ ಜ್ಞಾನದ ಸಂಕೇತ. ನೀನು ಆಕೆಯ ಮೇಲೆ ಉರಿಗಣ್ಣನ್ನು ತೆರೆದಿರುವಿ. ಉರಿಗಣ್ಣಿಗಿಂತ ಅರಿವಿನ ಕಣ್ಣು ಹೆಚ್ಚಿನದು. ನಿನ್ನ ಅಹಂಕಾರ ನಿನ್ನ ಅರಿವಿನ ಕಣ್ಣಿಗೆ ಮುಸುಕಾಗಿದೆ. ಅದನ್ನು ಸರಿಸಿ ನನ್ನ ದೇವಿಯನ್ನು ನೋಡು ಆಕೆ ಸಾಕ್ಷಾತ್ ಉಮಾದೇವಿ. ಈ ಅರಿವಿನ ಕುರುಹನ್ನು ಮುಂದಿಟ್ಟುಕೊಂಡು ಜನರಲ್ಲಿ ಜ್ಞಾನ ಪ್ರಸಾರ ಮಾಡುತ್ತಿದ್ದೇನೆ. ಮಾಯಾಬಂಧನ ಬಿಡಿಸುತ್ತಿದ್ದೇನೆ" ಬೊಮ್ಮಣ್ಣನ ಈ ಮಾತಿಗೆ ಶಂಕರ ದಾಸಿಮಯ್ಯ ಒಂದು ಪ್ರಶ್ನೆ ಹಾಕಿದನು. "ನೀನು ಮಾರಿಯನ್ನು ಇದಿರಿಟ್ಟು ಪೂಜಿಸುವಿ: ಇದು ವಿರೋಧವಲ್ಲವೆ" ? ಈ ಪ್ರಶ್ನೆಗೆ

ಬೊಮ್ಮಣ್ಣ "ನಾನು ಮಾರಿಯನ್ನು ನನ್ನ ಇಷ್ಟಲಿಂಗವನ್ನು ಬೇರೆಬೇರೆಯೆಂದು ತಿಳಿದಿಲ್ಲ. ಅವೆರಡೂ ಒಂದೇ ಆಗಿವೆ. ಮಾರಿಯನ್ನು ಆರಾಧಿಸುವದರಲ್ಲಿಯೇ ಮಾರಿಯನ್ನು ಆರಾಧಿಸು ವದರಲ್ಲಿಯೇ ಇಷ್ಟಲಿಂಗದ ಸ್ವರೂಪವನ್ನು ಕಾಣುವೆನು. ಆ ಇಷ್ಟಲಿಂಗದಲ್ಲಿಯೇ ಮಾರಿಯನ್ನು ಕಾಣುವೆನು, ಲಿಂಗ ಸಾಕಾರವೆನಿಸಿದರೂ ಅದು ನಿರಾಕಾರ, ಹೀಗೆ ಅಕಾರ ರಹಿತವಾದ. ಸಕಲವನ್ನು ಲಿಂಗವೆಂದು ತಿಳಿದು ಆಚರಿಸುವವನಲ್ಲಿ ಇದಿರಿಟ್ಟು ಪೂಜಿಸುವುದೇನು ಬಂತು"? ಎಂದು ಸಮರ್ಪಕವಾದ ಉತ್ತರ ವಿತ್ತನು. ಅಷ್ಟೇ ಅಲ್ಲ, ಅದರ ಸಮರ್ಥನೆಗೆ ಆತ ಮಾರಿಯನ್ನು ಇಷ್ಟಲಿಂಗದಲ್ಲೂ ಇಷ್ಟಲಿಂಗವನ್ನು ಮಾರಿಯಲ್ಲೂ ಅಡಗಿಸಿ ತೋರಿಸಿದನು. ಇಷ್ಟಲಿಂಗದಲ್ಲಿ ಮಾರಿ ಅಡಗಿದಾಗ ಅದು ಕುಣಿಯತೊಡಗಿತು. ಇದನ್ನು ಕಂಡ ಸಕಲಜನ ಬೆರಗಿನಿಂದ ಮೂಕರಾದರು, ಢಕ್ಕೆಯ ಬೊಮ್ಮಣ್ಣ ಪೂಜ್ಯ ಮಹಾತ್ಮನೆಂದು ಲೋಕವೇ ಅರಿತುಕೊಂಡಿತು. ಶಂಕರದಾಸಿಮಯ್ಯನಿಗೆ ತನ್ನ ತಪ್ಪಿನ ಅರಿವುಂಟಾಗಿ ಪಶ್ಚಾತ್ತಾಪಗೊಂಡು ಬೊಮ್ಮಣ್ಣನಲ್ಲಿ ಕ್ಷಮೆ ಕೇಳಿದನು. ಆಗ ಮಾರಿ ಅವನ ಹಣೆಗಣ್ಣನ್ನು ಉಗುಳಿ, ಮರಳಿ ಆತನಿಗೆ ಕೊಟ್ಟಿತು.

"ಅರಿವುಳ್ಳವಂಗೆ ಅರಿದಿಹೆನೆಂಬುದೇ ಮಾಯೆ" ಎಂಬಂತೆ ಶಂಕರದಾಸಿಮಯ್ಯನಿಗೆ ತುಸು ಅಹಂಕಾರವೂ ಬಂದಿತ್ತು. ಆ ಅಹಂಕಾರದಿಂದ ತನ್ನ ಮನೆಯ ಮುಂದೆ ಬಂದವರನ್ನು ತಿಳಿಯಲು ಅಸಮರ್ಥನಾದನು. ಕತ್ತಲೆ ಕಣ್ಣನ್ನು ಮುಸುಕಿದಾಗ ಬೆಳಕನ್ನು ಗುರುತಿಸಲು ಹೇಗೆ ಸಾಧ್ಯ? ಈ ಹಿಂದೆ, ಜೇಡರದಾಸಿಮಯ್ಯನಿಗೆ ಅಹಂಕಾರ ಬಂದಾಗ ಇದೇ ಶಂಕರದಾಸಿಮಯ್ಯ ಅವನ ಅಹಂಕಾರ ಕಳೆದಿದ್ದನು. ಭಕ್ತನಿಗೆ ಅಹಂಕಾರ ಬಂದರೆ ಅದನ್ನು ಭಕ್ತನೇ ದೂರ

ಮಾಡಬೇಕು. ಹೀಗೆ ಶಂಕರದಾಸಿಮಯ್ಯನ ಅಹಂಕಾರವನ್ನು ಕಳೆದ ಬೊಮ್ಮಣ್ಣನ ಬದುಕಿನ ಘಟನೆಯು ಎಲ್ಲ ಗ್ರಂಥಗಳಲ್ಲಿ ಸಿಗುವದು. ಶಂಕರದಾಸಿಮಯ್ಯನ ಇಳಿವಯಸ್ಸಿಗೆ ಅಹಂಕಾರ ಬಂದು ಆತನ ಇಡೀ ಬದುಕಿನ ಫಲವನ್ನೇ ವ್ಯರ್ಥವಾಡಿತ್ತು. ಜ್ಞಾನದ ಬೆಳಗನ್ನು ಬೊಮ್ಮಯ್ಯ ಮತ್ತೆ ಹಿಂದಿರುಗಿಸಿದನು.

ಈ ಪೂರ್ವದಲ್ಲಿ ಕೀಳುದೈವಾರಾಧನೆ ಇತ್ತು; ಈಗೂ ಇದೆ. ಕೀಳುದೈವಗಳಿಗೆ ಬಲಿಕೊಟ್ಟು ಜನ ಹಿಂಸಾಚಾರಕ್ಕೆ ಇಳಿದಿದ್ದರು. ಆ ದೈವಗಳಿಂದ ಅಹಿಂಸೆ, ಸ್ನೇಹ, ಸೌಮ್ಯತೆಗಳನ್ನು ಮರೆತು ಕ್ರೌರ್ಯ. ಹಿಂಸೆಯಲ್ಲಿ ತೊಡಗಿದ್ದರು. ಈ ರೀತಿಯ ಕೀಳು ದೈವಾರಾಧನೆ ಯನ್ನು ಶಂಕರದಾಸಿಮಯ್ಯ ಖಂಡಿಸಿದ್ದು ಸರಿಯಾಗಿದೆ. ಆದರೆ ಢಕ್ಕೆಯ ಬೊಮ್ಮಣ್ಣ ಹಿಡಿದ ಮಾರ್ಗವೇ ಬೇರೆಯಾಗಿತ್ತು. ಢಕ್ಕೆಯ ಬೊಮ್ಮಣ್ಣನ ಮಾರಿ ಸಾಮಾನ್ಯ ಜನರಿಗೆ ಹಿಂಸೆ ಕೊಡುವ ದೈವವಾಗಿರಲಿಲ್ಲ; ಅದು ಅವನ ಜ್ಞಾನದ ಸಂಕೇತ ವಾಗಿತ್ತು. ಅಂತೆಯೇ ಅದು ಶಂಕರದಾಸಿಮಯ್ಯನ ಹಣೆಗಣ್ಣಿನಿಂದ ಉಳಿದ ದೈವಗಳಂತೆ ಸುಟ್ಟು ಹೋಗಲಿಲ್ಲ. ಆ ಮಾರಿಯ ಮೂಲಕ ಆತ ತನ್ನಲ್ಲಿ ಆತ್ಮಶಕ್ತಿಯನ್ನು ಬೆಳೆಸಿಕೊಂಡಿದ್ದನು. ಆದ್ದರಿಂದ ಆತ ಮಾರಿಯನ್ನು ಇಷ್ಟಲಿಂಗದಲ್ಲಿ ಅಡಗಿಸಿಕೊಳ್ಳಲು ಸಮರ್ಥ ನಾದನು. ಅಲ್ಲದೆ ಇದು ಆತನ ಕಾಯಕದ ವಸ್ತುವಾಗಿತ್ತು. ಆ ಕಾಯಕದಿಂದಲೇ ಆತ ಜೀವಿಸುತ್ತ ಜನರ ಮಧ್ಯದಲ್ಲಿದ್ದು ಜನರ ತನುಮನವನ್ನು ಉದ್ಧರಿಸುತ್ತಿದ್ದನು.

ಬೊಮ್ಮಣ್ಣನ ಮಾರಿ ಮಾರಿಯಲ್ಲ, ಅವಳು ಉಮೆ ಯಾಗಿದ್ದಳು. ಈ ಜಾನಪದ ಕಲೆಯನ್ನಾತ ಕಾಯಕದ ಮಟ್ಟಕ್ಕೇರಿ ಸಿದ್ದನು. ಬೊಮ್ಮಯ್ಯನು ಬದುಕಿನಲ್ಲಿ ಅಷ್ಟಾವರಣಗಳ ಆಚರಣೆ ಯಿಂದ ತನುಮನ ಶುದ್ಧವಾಗಿಟ್ಟುಕೊಂಡು, ಸಾತ್ವಿಕ ಕಳೆಯಿಂದ

ಬೆಳಗಿದನು. ಆಧ್ಯಾತ್ಮವನ್ನು ದುಡಿಮೆಯಲ್ಲಿ ಸಾಧಿಸಿದನು; ಅಲ್ಪವಾಗಿರುವುದನ್ನೇ ಮಹತ್ವನ್ನಾಗಿಸಿ ತೋರಿಸಿದನು. ಕ್ಷುಲ್ಲಕತನವನ್ನು ದೈವತ್ವಕ್ಕೆ ಏರಿಸಿದನು.

ಶಂಕರದಾಸಿಮಯ್ಯ ಕ್ಷುಲ್ಲಕದೈವಗಳನ್ನು ಸುಡುತ್ತಿದ್ದುದು ನಿಜ. ಅವುಗಳಿಂದ ಸೇವಿಸಿಕೊಳ್ಳುತ್ತಿದ್ದುದು ಸರಿ: ಆದರೆ ಅವುಗಳಿಗೆ ಇಷ್ಟಲಿಂಗವಾಗುವ ಭಾಗ್ಯ ಅವನಿಂದ ಬರಲಿಲ್ಲ. ಬೊಮ್ಮಣ್ಣ ಅದೇ ಕ್ಷುಲ್ಲಕವಾದ ಮಾರಿಯನ್ನು ಸುಡಲಿಲ್ಲ; ಅದರಿಂದ ಸೇವಿಸಿಕೊಳ್ಳಲಿಲ್ಲ. ಅದನ್ನು ಇಷ್ಟಲಿಂಗವನ್ನಾಗಿ, ಉಮೆಯನ್ನಾಗಿ ಪರಿವರ್ತಿಸಿದನು. ಎರಡರ ವ್ಯತ್ಯಾಸಗಳು ಸ್ಪಷ್ಟವಾಗಿವೆ. ಆ ಕ್ಷುಲ್ಲಕ ದೈವಗಳನ್ನು ಶಂಕರದಾಸಿಮಯ್ಯ ಸುಟ್ಟು ನಾಶಮಾಡಿದ್ದರೆ, ಬೊಮ್ಮಯ್ಯ ಅವನ್ನು ದೈವತ್ವದ ಮಟ್ಟಕ್ಕೇರಿಸಿ ಅವುಗಳನ್ನು ಉದಾತ್ತೀಕರಿಸಿದನು. ಅಂದಮೇಲೆ, ಕ್ಷುಲ್ಲಕದೈವಗಳೇ ಸ್ವಂತವಾಗಿ, ಕೆಟ್ಟವಾಗಿ, ದುಷ್ಟವಾಗಿ ಇರುವದಿಲ್ಲ. ಅವು ಬಲಿ ಬೇಡುವದಿಲ್ಲ ಮಾನವನಿಗೆ ಹಿಂಸಾಚಾರಕ್ಕೆ ಎಳೆಯುವದೂ ಇಲ್ಲ. ಅದನೆಲ್ಲ ಮಾಡಿದವನು ಮನುಷ್ಯನೇ. ತನ್ನ ಸ್ವಾರ್ಥಕ್ಕಾಗಿ ಆತ ಈ ದೈವಗಳನ್ನು ಕ್ಷುಲ್ಲಕತ್ವಕ್ಕೆ ಇಳಿಸಿದ್ದಾನೆ. ಆ ಕ್ಷುಲ್ಲಕಕ್ಕೆ ಇಳಿಸಿದ ದೈವಗಳನ್ನೇ ಮಾನವನು ಅರಿತು ಆರಾಧಿಸಿ ಅವನ್ನೇ ದೈವತ್ವಕ್ಕೆ ಏರಿಸಬಹುದೆಂಬುದನ್ನು ಬೊಮ್ಮಣ್ಣ ತೋರಿಸಿಕೊಟ್ಟಿದ್ದಾನೆ. ಜನರ ಜೀವನದಲ್ಲಿರುವ ಅಜ್ಞಾನವೇ ಮಾರಿ. ಅದನ್ನು ಪರಿವರ್ತಿಸಿದಾಗ ಅಲ್ಲಿ ಜ್ಞಾನೋದಯವಾಗುವದು. ಇವನ್ನೇ ಆತನ ಮಾರಿ ಸಂಕೇತಿಸುತ್ತದೆ. ಬೊಮ್ಮಣ್ಣನ ಬದುಕು ಇದನ್ನು ಪ್ರತಿಪಾದಿಸುತ್ತದೆ. ಆತ ಕೈಕೊಂಡ ಕಾಯಕವೇ ಆತನ ವಿಚಾರಗಳನ್ನು ಬಿಂಬಿಸುವದು. ಅಂತೆಯೇ ಆತನ ಬದುಕು ಸಕಲರಿಗೂ ಮಾದರಿಯಾಗಿದೆ.

ಢಕ್ಕೆಯ ಬೊಮ್ಮಣ್ಣನ ವಚನಗಳಲ್ಲಿ ಮಾರಿ

ವಚನಸಾಹಿತ್ಯ ಜಗತ್ತಿಗೆ ಶರಣರಿತ್ತ ಅಪೂರ್ವ ಕಾಣಿಕೆ. ಶೈಲಿ, ಭಾಷೆ, ಭಾವ, ಅರ್ಥ ಒಂದೇ ಎರಡೇ. ಎಲ್ಲದರಲ್ಲಿಯೂ ಅದು ಅದ್ವಿತೀಯ. ಅವು ಕನ್ನಡ ಸಾಹಿತ್ಯ ಕಣ್ಮಣಿಗಳಾಗಿವೆ.

ಢಕ್ಕೆಯ ಬೊಮ್ಮಣ್ಣನ ವಚನರಾಶಿ ಎಷ್ಟೋ ತಿಳಿಯದು. ಸದ್ಯ ೯೮ ವಚನಗಳು ಉಪಲಬ್ಧವಿವೆ. ಢಕ್ಕೆಯ ಬೊಮ್ಮಣ್ಣನ ವಚನದ ಅಂಕಿತವು 'ಕಾಲಾಂತಕಭೀಮೇಶ್ವರ ಲಿಂಗ' ಎಂದಾಗಿದೆ. ಢಕ್ಕೆಯ ಬೊಮ್ಮಣ್ಣನು ಅಲ್ಪವಾದುದನ್ನು ಮಹತ್ತನ್ನಾಗಿ ಮಾಡಿ ತೋರಿಸಿದನು. ಆತ ಮಾರಿಯನ್ನು ತನ್ನ ಕಾಯಕದಲ್ಲಿ ಬಳಸುತ್ತಿದ್ದನಷ್ಟೇ ಅಲ್ಲದೆ, ಅದನ್ನು ಉಮೆಯನ್ನಾಗಿ ಪರಿವರ್ತಿಸಿದ್ದನು. ಮಾರಿಯು ಇಲ್ಲಿ ಇಷ್ಟಲಿಂಗವಾಗುವ ಭಾಗ್ಯವನ್ನು ಪಡೆಯಿತು. ಸಕಲರೂ ಬದುಕಿನಲ್ಲಿರುವ ಮಾರಿಯನ್ನು ಹೊಡೆದೋಡಿಸಬೇಕೆನ್ನುವರು. ಆದರೆ ಅದನ್ನೇ ಬೇರೆ ರೀತಿಯಲ್ಲಿ ಮಾರ್ಪಡಿಸಿದ್ದಾನೆ ಬೊಮ್ಮಣ್ಣ. ಜೀವನದಲ್ಲಿ ಮಾರಿ ಇದ್ದವಳೇ. ಆದರೆ ಅವಳನ್ನು ಉಮೆಯಾಗಿ ಪರಿವರ್ತಿಸಿ ತತ್ವದರ್ಶನ ಪಡೆಯುವದು ಆವಶ್ಯಕ. ಮಾರಿಯ ಬಗ್ಗೆ ಇರುವ ಈತನ ವಚನಗಳನ್ನು ನೋಡಿದಾಗ ಅಂದಿನ ಜನಜೀವನದಲ್ಲಿ ಮಾರಿಯ ಬಗೆಗೆ ಚರ್ಚೆ ಜಿಜ್ಞಾಸೆ ನಡೆದಿರಬೇಕು. ಹೆಚ್ಚು ಹೆಚ್ಚಾಗಿ ಅದನ್ನು ತಿಳಿಯಲು ಕುತೂಹಲಿಗಳಾಗಿರಬೇಕು. ಅನೇಕ ಪ್ರಶ್ನೆಗಳೂ ಎದ್ದಿರಬೇಕು ಎನಿಸುತ್ತದೆ. ಆ ಎಲ್ಲ ಪ್ರಶ್ನೆಗಳಿಗೆ ಬೊಮ್ಮಣ್ಣ ಸಮರ್ಪಕ ಉತ್ತರ ಕೊಟ್ಟಂತಿದೆ. ಮಾರಿಯ ಬಗೆಗೆ ಸಾಕಷ್ಟು ವಿವೇಚನೆ ಈತನ ವಚನಗಳಲ್ಲಿ ಬರುವದು.

ಈತನ ಮಾರಿಯೇ ಮಾಯೆ. ಇವರಿಬ್ಬರೂ ಬೇರೆ ಬೇರೆ ಅಲ್ಲ. ಜನರು ಯಾವ ಮಾರಿಯನ್ನು ತ್ಯಜಿಸಲು ಹೆಣಗುವರೋ ಅದೇ ಮಾರಿಯನ್ನು ಹೊಂದಿ ಈತ ಕಾಯಕ ಮಾಡುತ್ತಿದ್ದನು; ಜನರಿಗೆ ತತ್ವ ಭೋಧಿಸುತ್ತಿದ್ದನು. ಮಾರಿಯನ್ನಗಲಿ ಅವನು ಜಣವೂ ಇರುತ್ತಿರಲಿಲ್ಲ. ಆದರೆ ವ್ಯತ್ಯಾಸವಿಷ್ಟೇ: ಆ ಮಾರಿ ಜನರನು ಹಿಂಸಿಸುವ ಕ್ರೂರ ಮಾರಿಯಾಗಿರದೆ, ಕ್ಷುಲ್ಲಕ ದೇವತೆಯಾಗಿರದೆ, ಈತನ ಕೃಪೆಯಿಂದ, ಆರಾಧನೆಯಿಂದ ಉಮಾದೇವಿಯಾಗಿತ್ತು. ತನ್ನಲ್ಲಿರುವ ತಾಮಸವನ್ನೂ ದುಷ್ಟತನವನ್ನೂ ತೊರೆದು ಸಾತ್ವಿಕ ಶಕ್ತಿಯಾಗಿತ್ತು. ಶಂಕರನ ಅರ್ಧಾಂಗಿನಿಯಾಗುವ ದೈವ ಅದಕ್ಕಿತ್ತು. ಇದು ಬೊಮ್ಮಣ್ಣನ ಬದುಕಿನ ಸಾಧನೆ. ಇದನ್ನೇ ಆತ ತನ್ನ ವಚನಗಳಲ್ಲಿ ಬಹು ಸುಂದರವಾಗಿ ಚಿತ್ರಿಸಿದ್ದಾನೆ. ಇಲ್ಲಿ ಮಾಯೆ ಒಂದು ಸಮಸ್ಯೆಯಾಗದೆ, ಪ್ರಶ್ನೆಯಾಗದೆ ಉತ್ತರವಾಗಿದ್ದಾಳೆ, ಆದರ್ಶವಾಗಿದ್ದಾಳೆ. ಮಾಯೆಯನ್ನು ಗೆದೆಯಲು ಮಾರಿಯ ನೆರವು ಬೇಕು. ಅವನ ಮಾಯೆ ಎಂಥವಳೆಂಬುದು ಅವನ ವಚನಗಳಲ್ಲಿ ಹೀಗೆ ವ್ಯಕ್ತವಾಗಿದೆ:

> ಮಹಾಕಾಳಾಂಧರ ಹಿಂಗಿ ಕಾಲಂಗಳಹಾಗ
> ಮಾಯಾಂಗನೆ ಮಹಾದೇವನ ಮರೆದವರಿಗೆ ಮಾರಿ
> ಯಾದಳು.
> ಸತ್ತ್ವೀ ಸಜ್ಜನಯುಕ್ತಿಯಿಂದ ಸದಾಶಿವನನರಿಯಲಾಗಿ
> ಉಮಾದೇವಿಯಾದಳು.
> ಇಂತೀ ಗುಣವ ಮರೆದಡೆ ಮಾಯೆಯಾಗಿ
> ಅರಿದಡೆ ಸ್ವಯವಾಗಿ
> ತನ್ನಲ್ಲಿ ಅನ್ಯ ಭಿನ್ನವಿಲ್ಲದೆ.

ಥಕ್ಕೆಯ ಉಲುಹಡುಗುವದಕ್ಕೆ ಮೊದಲೆ
ಕಾಲಾಂತಕ ಭೀಮೇಶ್ವರಲಿಂಗವನರಿಯಬೇಕು

ನಮ್ಮಲ್ಲಿರುವ ಮಾರಿ ನಮ್ಮಿಂದ ಬೇರೆಯಾಗಲು ಎಂದಿಗೂ ಸಾಧ್ಯವಿಲ್ಲ. ಆದರೆ ಅದೇ ಮಾಯೆಯು ಬೇರೆ ಬೇರೆ ರೂಪ ತೊಡುವಳು; ಆ ರೂಪಗಳಲ್ಲಿ ಆಕೆ ಸಾತ್ವಿಕ ರೂಪ ಧರಿಸುವಂತೆ ಮಾಡಬೇಕು. ಅದೇ ತತ್ವವನ್ನು ಮೇಲಿನ ವಚನದಲ್ಲಿ ಬೊಮ್ಮಣ್ಣ ಸರಳವಾಗಿ ಹೇಳಿದ್ದಾನೆ. ಮಹದೇವನನ್ನು ಯಾರು ಮರೆತು ಕೇವಲ ಲೌಕಿಕಭೋಗದಲ್ಲಿ ಮಗ್ನರಾಗಿ ಸಂಸಾರ ಬಂಧನದಲ್ಲಿ ಸಿಲುಕುವರೋ ಅವರಿಗೆ ಈ ಮಾರಿ ಮಾಯಾಂಗನೆಯಾಗಿ, ಕುಳಿತಲ್ಲಿ ನಿಂತಲ್ಲಿ ಸುತ್ತಿಸುತ್ತಿ ಕಾಡುವಳು. ಸಂಸಾರಸಾಗರದಲ್ಲಿ ಮುಳುಗಾಡಿಸಿ ಸಾಕುಬೇಕೆನ್ನುವಂತೆ ಮಾಡುವಳು. ಆದರೆ ಮಹಾದೇವನನ್ನರಿತು ಸಂಸಾರದಲ್ಲಿ ಇದ್ದು ಇಲ್ಲದಂತೆ ಇರುವವರಿಗೆ ಆಕೆ ಉಮಾದೇವಿಯಾಗುವಳು. ಸದಾಶಿವನನ್ನು ಅರಿಯುವಲ್ಲಿ ಬೇಕಾದ ಸುಜ್ಞಾನವೇ ಉಮೆ. ಆದರೆ ಕೇವಲ ಸುಜ್ಞಾನದಿಂದ ಮಾಯೆಯನ್ನು ಗೆದೆಯಲು ಸಾಧ್ಯವಿಲ್ಲ. ಸುಜ್ಞಾನದ ಜೊತೆಗೆ ಸತ್ಕ್ರಿಯೆ ಇರಬೇಕು. ಅರಿವು ಆಚರಣೆಗೆ ಬಂದಾಗಲೇ ಮಾಯೆ ಉಮೆಯಾಗಿ ಪರಿವರ್ತನಗೊಳ್ಳುವಳೆಂಬುದನ್ನಿಲ್ಲಿ ಬೊಮ್ಮಣ್ಣ ಅತ್ಯಂತ ಸೂಕ್ಷ್ಮವಾಗಿ ಸೂಚ್ಯವಾಗಿ ಹೇಳಿದ್ದಾನೆ. ಸತ್ಕ್ರಿಯೆಯಿಂದ ಸಜ್ಜನಸಂಗದಿಂದ, ಅರಿವಿನ ಆಚರಣೆಯಿಂದ ಮಾಯೆಯನ್ನು ಗೆದ್ದು ಮಹದೇವನನ್ನು ಅರಿಯ ಬಹುದೆನ್ನುವುದನ್ನು ಸುಲಭವಾಗಿ ಸಕಲರಿಗೂ ತಿಳಿಯುವಂತೆ ಆತ ಬಿಡಿಸಿ ಹೇಳಿದ್ದಾನೆ. ಈತನ ವಚನಗಳಲ್ಲಿ ಎಲ್ಲಿಯೂ ಸುಕ್ಕುಗಳಿಲ್ಲ; ಎಲ್ಲವೂ ನೇರ ನೇಯ್ಗೆಯೇ:

ಬ್ರಹ್ಮಂಗೆ ಸರಸ್ವತಿಯಾಗಿ ಬೆನ್ನಲ್ಲಿ ಬಂದಳು ಮಾಯೆ.
ವಿಷ್ಣುವಿಂಗೆ ಲಕ್ಷ್ಮಿಯಾಗಿ ಭವಕ್ಕೆ ತಿರುಗಿದಳು ಮಾಯೆ.
ರುದ್ರಂಗೆ ಉಮಾದೇವಿಯಾಗಿ ಶಿರ ತೊಡೆಯಲ್ಲಿ ಕಾಡಿ
ದಳು ಮಾಯೆ.
ಎಳ್ಳಿಗೆ ಎಣ್ಣೆಯಾಗಿ ಮುಳ್ಳಿಗೆ ಮೊನೆಯಾಗಿ, ಹೂವಿಗೆ
ಗಂಧವಾಗಿ,
ಅವರವರಂಗದಲ್ಲಿ ಹಿಂಗದ ಪ್ರತಿರೂಪಾಗಿ ಸಂದಿಲ್ಲದೆ
ಕಾಡುತ್ತಿದ್ದಾಳೆ ಮಾಯೆ.
ಢಕ್ಕೆಯ ಉಲುಹಡಗುವದಕ್ಕೆ ಮುನ್ನವೆ ಮುನ್ನವೆ
ನಿಶ್ಚೈಸಿಕೊಳ್ಳಿ,
ಕಾಲಾಂತಕ ಭೀಮೇಶ್ವರಲಿಂಗವನರಿಯ ಬಲ್ಲಡೆ,

ಬ್ರಹ್ಮನಿಗೆ ಸರಸ್ವತಿಯಾಗಿ, ವಿಷ್ಣುವಿಗೆ ಲಕ್ಷ್ಮಿಯಾಗಿ, ರುದ್ರನಿಗೆ ಉಮೆಯಾಗಿ ಮಾಯೆ ಮಾನವನನ್ನಲ್ಲದೆ ದೇವತೆಗಳನ್ನೂ ಕಾಡು ವಳು. ಆಕೆ ವಿಶ್ವವ್ಯಾಪಿ, ಆಕೆ ಇರದ ಸ್ಥಳಗಳೇ ಇಲ್ಲ. ಪ್ರತಿ ಉಸಿರಿನಲ್ಲೂ ಆಕೆ ಇದ್ದಾಳೆ. ಎಳ್ಳಿನಲ್ಲಿ ಎಣ್ಣೆಯಾಗಿ, ಹೂವಿ ನಲ್ಲಿ ಗಂಧವಾಗಿ, ಮುಳ್ಳಿಗೆ ಮೊನೆಯಾಗಿ ಅವರವರ ಅಂಗದಲ್ಲಿ ಹಿಂಗದ ಪ್ರತಿರೂಪವಾಗಿ ಕಾಡುತ್ತಿದ್ದಾಳೆ. ಸಂದು ಸಂದಿನಲ್ಲಿ ಬಿಡದೆ ಆವರಿಸಿದ್ದಾಳೆ. ಅಣು ಅಣುವಿನಲ್ಲಿ ಭದ್ರವಾಗಿ ಕೂತಿ ದ್ದಾಳೆ. ಈ ಮಾಯೆಯನ್ನು ಗೆದೆಯಲು ಏನು ಮಾಡುವುದು? ಆಕೆಯನ್ನು ಈ ಬದುಕಿನಿಂದ ಸಂಪೂರ್ಣವಾಗಿ ತ್ಯಜಿಸಿ ಗೆದೆಯಬೇಕೆಂಬ ಸಲಹೆ ಸರಿಯೆನಿಸದು. ಯಾಕೆಂದರೆ ಹೂವಿ ನಲ್ಲಿಯ ಗಂಧವನ್ನು, ಎಳ್ಳಿನಲ್ಲಿರುವ ಎಣ್ಣೆಯನ್ನು, ಮುಳ್ಳಿನಲ್ಲಿ

ರುವ ಮೋನೆಯನ್ನು ತೆಗೆದರೆ ಯಾವ ಸ್ವಾರಸ್ಯ ಉಳಿದೀತು! ಹಾಗೆ ಮಾಡುವುದರಿಂದ ಎಳ್ಳಿಗೆ ಎಳ್ಳೆಂದೂ ಹೂವಿಗೆ ಹೂವೆಂದೂ, ಮುಳ್ಳಿಗೆ ಮುಳ್ಳೆಂದೂ ಅನ್ನಲಿಕ್ಕೆ ಬಾರದು. ಅಂದಮೇಲೆ ಅವು ಇರಲೇಬೇಕೆಂದಂತಾಯಿತು. ಹಾಗೆಂದಾಗ ಮಾಯೆಯನ್ನು ತ್ಯಜಿಸಲುಬಾರದು: ತ್ಯಜಿಸಿದರೆ ಬದುಕಿನಲ್ಲಿಯ ಸ್ವಾರಸ್ಯ ಸಂತೋಷಗಳೇ ಉಳಿಯಲಿಕ್ಕಿಲ್ಲ! ಮಾಯೆ ಈ ಬದುಕಿಗೆ ಅವಶ್ಯ ಎಂದಾದ ಮೇಲೆ ಆಕೆಯನ್ನು ಅದೇ ಮಾರಿಯ ಸ್ವರೂಪದಲ್ಲಿರಲು ಬಿಡದೆ ಬೊಮ್ಮಯ್ಯನ ಬೋಧೆಯಂತೆ ಉಮೆಯನ್ನಾಗಿ ಮಾಡಬೇಕು. ತ್ರಿಕಾಲ ಸತ್ಯವಾಗಿರುವ ಮಾಯೆ ನಮ್ಮ ಬದುಕಿನ ಉಸಿರು; ಆ ಉಸಿರನ್ನೇ ಪರಿಮಳವಾಗಿಸಬೇಕು, ಮಾನವನ ಆಸೆ ಲೋಭ ಮೊದಲಾದ ಕಾಮನೆಗಳನ್ನೇ ಉದಾತ್ತೀಕರಿಸಬೇಕು, ಆಗ ಅವೇ ಸದಾಶಿವನನ್ನರಿತ ಉಮೆಯಾಗಿ ಪರಿವರ್ತನೆ ಹೊಂದುವವು. ಇದನ್ನೇ ಬೊಮ್ಮಯ್ಯ ಆಚರಿಸಿ ತೋರಿಸಿದನು:

ಅಱಿವುಳ್ಳವಂಗೆ ಅಱಿವನಱಿದೆಹೆನೆಂಬುದೆ ಮಾಯೆ,
ಮೂಱು ಮಱಿದು ಬೇಱೊಂದ ಕಂಡೆಹೆನೆಂಬುದೆ ಮಾಯೆ
ನುಡಿಯ ನುಡಿವವರಲ್ಲಿ ಎಡೆ ಮಾತನಾಡಿ ಬೇಱೊಂದೆ ಡೆವುಂಟೆಂಬುದೆ ಮಾಯೆ
ಘಟಮಟವೆಂಬ ಮನೆಯಲ್ಲಿ ಮಱವೆಯೆಂಬ ಮಾರಿಯ ಹೊತ್ತು
ಭವವೆಂಬ ಬಾಗಿಲಲ್ಲಿ ತಿರುಗಾಡುತ್ತಿದ್ದೇನೆ,
ಢಕ್ಕೆಯ ಡಾವರಕ್ಕೆ ಸಿಕ್ಕಿ ನೊಂದೆನು,
ಇದಱಿಚ್ಛುಗವ ಬಿಡಿಸು, ಕಾಲಾಂತಕ ಭೀಮೇಶ್ವರಲಿಂಗ

ಅರಿವುಳ್ಳವಂಗೆ ಅರಿತಿಹೆನೆಂಬುದೇ ಮಾಯೆ! ಎಂಥ ಅರ್ಥಪೂರ್ಣ ಮಾತಿದು. ಇಂದು ಪ್ರತಿಯೊಬ್ಬನ ಸ್ಥಿತಿಯೂ ಹೀಗೇ ಆಗಿದೆ. ಅರಿತಿರುವವನು ಅರಿತಿರುವೆನೆಂದು ಗರ್ವ ಪಡದೆ, ಮಾಯೆಯಿಂದ ದೂರವಿರುವದು ಲೇಸು. ಅರಿತಿರುವೆನೆಂಬ ಮಾಯೆಯೇ ಮಾನವನ ಅಧಃಪತನಕ್ಕೆ ಕಾರಣವಾಗುವದು. ಇಲ್ಲಿ ಬೊಮ್ಮಣ್ಣನ ಸೂಕ್ಷ್ಮದೃಷ್ಟಿ, ಅನುಭಾವ, ಅನುಭವಗಳ ಆಳ ಅರಿವಿಗೆ ಬರುವದು.

ಮಾರಿ ಕುಣಿಸುವ ಕಾಯಕದಿಂದ ಮಾರಿಯನ್ನು ಉಮೆಯನ್ನಾಗಿ ಮಾಡಿ ಅಲ್ಲಿ ಆಕೆಗೆ ತನ್ನನ್ನು ತಾನು ಬೊಮ್ಮಯ್ಯ ಅರ್ಪಿಸಿಕೊಂಡನು. ಈ ಮಾರಿ, ಜ್ಞಾನಕ್ಕೆ, ಅರಿವಿಗೆ, ಸಾತ್ವಿಕತೆಗೆ ಸಂಕೇತವಾಗಿ ಈತನ ವಚನಗಳಲ್ಲಿ ನಿಂತಿದ್ದಾಳೆ. ಮಾರಿಯ ಬಗೆಗೆ ಇಷ್ಟು ಸೂಕ್ಷ್ಮವಾಗಿ ಸೂಚ್ಯವಾಗಿ. ಸ್ಪಷ್ಟವಾಗಿ ಬೇರೆ ಯಾರೂ ಹೇಳಿದಂತಿಲ್ಲ.

ಢಕ್ಕೆಯ ಬೊಮ್ಮಣ್ಣನ ವಚನಗಳಲ್ಲಿ ಕಾಯಕ

ಢಕ್ಕೆಯ ಬೊಮ್ಮಣ್ಣನ ವಚನಗಳು ಕಾಯಕವಿಷಯವನ್ನು ಬಹು ಮನೋಹರವಾಗಿ ಚಿತ್ರಿಸುತ್ತವೆ. ಕೈಕೊಂಡ ಕಾಯಕವೇ ಆತನ ವ್ಯಕ್ತಿತ್ವವನ್ನು ರೂಪಿಸಿದೆಯೆಂದು ಹೇಳಿದರೆ ತಪ್ಪಾಗದು. ಕಾಯಕದ ಬಗೆಗೆ ಆತ ತಳೆದ ಧೋರಣೆ, ಆಚರಣೆ, ವಿಚಾರ ಎಲ್ಲ ಹೊಸದು; ಅತಿವ್ಯಾಪ್ತಿ ಉಳ್ಳದು:

ಆವ ಸ್ವ ಕಾಯಕದಿಂದಾದಡು ಆಗಲಿ
ಭಾವಶುದ್ಧವಾಗಿ ಮಾಡುವುದೇ ಜಂಗಮ ಪೂಜೆ;
ಸೂರ ಹುಲ್ಲು ಚುಳುಕೋದಕ ನೇಮ ಕ್ರೀ ತಪ್ಪದೆ
ಮಾಡುವುದೆ ದೇವಪೂಜೆ.
ಆವ ಪ್ರಸಂಗ ಬಂದಡೆ ಖಂಡಿಸಿ ನುಡಿವುದೆ ಪಂಡಿತನಿರವು.
ತ್ರಿವಿಧ ಬಂದು ಮುಂದಿರಲಿಕ್ಕೆ ಅದಱಿಂದವ ನೋಡದಿಪ್ಪುದೆ
ನಿಸ್ಸಂಗ ಸುಸಂಗಿಯ ಇರವು.
ಇಂತೀ ವಿಚಾರವನಱಿದಲ್ಲಿ ಥಕ್ಕೆಯ ಮನ ಹೊರಗಾಯಿತ್ತು;
ಕಾಲಾಂತಕ ಭೀಮೇಶ್ವರಲಿಂಗವು ಒಳಗಾಯಿತ್ತು.

ಕಾಯಕ ತತ್ವವನ್ನು ಬಹು ಸುಂದರವಾಗಿ, ಸರಳವಾಗಿ ಅತ್ರ ಹೇಳಿದ್ದಾನೆ. ಎಲ್ಲದಕ್ಕೂ ನಮ್ಮ ಭಾವವೇ ಕಾರಣ. ಭಾವ ನಮ್ಮನ್ನು ಬಿಟ್ಟು ಬೇರೆ ಅಲ್ಲ. ಅದು ನಮ್ಮ ಮೈಮನಗಳಲ್ಲಿ ಬದುಕಿ ಸುದ್ದಕ್ಕೂ ಹರಡಿಕೊಂಡಿದೆ. ದುಷ್ಟ ಕಾರ್ಯಗಳಿಗೆ ದುಷ್ಟಭಾವ; ಒಳ್ಳೆಯ ಕಾರ್ಯಗಳಿಗೆ ಒಳ್ಳೆಯಭಾವ; ಅಳು-ನಗು, ಸುಖ-ದುಃಖ ಎಲ್ಲದಕ್ಕೂ ಈ ಭಾವವೇ ಕಾರಣವಾಗುವದು. ಅಂದಾಗ ಕಾಯಕ ಮಾಡುವಾಗಲೂ ಈ ಭಾವ ಇದ್ದೇ ಇರುವದು. ಅಂತೆಯೇ ಕಾಯಕ ಮಾಡುವಾಗ ನಮ್ಮ ಭಾವ ಶುದ್ಧವಾಗಿರಬೇಕು, ಭಾವ ಶುದ್ಧ ವಾಗಿಟ್ಟುಕೊಂಡು ಮಾಡಿದ ಕಾಯಕ ಶಿವಪೂಜೆ, ಜಂಗಮ ಸೇವೆ. ಆದುದರಿಂದ ಶಿವನಿಗೆ ಇನ್ನೊಂದು ಪೂಜೆಯ ಅಗತ್ಯವೇ ಇಲ್ಲ. ಅದಕ್ಕಾಗಿಯೇ ಬೊಮ್ಮಯ್ಯನ ಮಾರಿ ಉಮೆಯಾದಳು, ಲಿಂಗವಾದಳು. ಕಾಯಕದಲ್ಲಿ ಮೇಲು ಕೀಳಿಲ್ಲ; ಮೇಲು ಕೀಳಿರುವದು ಅವರವರ ಭಾವದಲ್ಲಿ ಮಾತ್ರ.

ಇಂಥ ತತ್ವ ಹೇಳಿಕೊಟ್ಟ ಬೊಮ್ಮಯ್ಯ ಸಮಾಜಕ್ಕೊಂದು ಹೊಸ ತಿರುವನ್ನು ತಂದುಕೊಟ್ಟನು. ಅಷ್ಟೇ ಅಲ್ಲ ಆತ ಭಿಕ್ಷೆ ಬೇಡು ವದನ್ನು ಖಂಡಿಸಿರುವನು. ಪ್ರತಿಯೊಬ್ಬನೂ ಕಾಯಕದಿಂದಲೇ ಜೀವಿಸಬೇಕೆಂದು ನಿರ್ದಾಕ್ಷಿಣ್ಯವಾಗಿ ಹೇಳಿ. ಭಿಕ್ಷೆ ಎಂದರೆ ಕೇವಲ ಮನೆ ಮನೆಗೆ ಹೋಗಿ ಬೇಡುವದಷ್ಟೇ ಅಲ್ಲ; ಜಾಣತನದ ಪಾಂಡಿತ್ಯದ ಪ್ರದರ್ಶನದಿಂದ ಗುರುಲಿಂಗ ಜಂಗಮದ ಹೆಸರಿನಿಂದ, ಜಾತಿಯ ದೊಡ್ಡಿಸ್ತಿಕೆಯಿಂದ, ಹೊಟ್ಟೆ ಹೊರೆಯುವುದೂ ಇದರಲ್ಲಿ ಸಮಾವೇಶವಾಗುತ್ತದೆ. ಇದನ್ನೂ ಅವನ ಮಾತಿನಲ್ಲೇ ಕೇಳಿರಿ:

ತ್ರಿವಿಧ ದೇವ ಕುಲಜಾತಿಗಾದಡೂ ಆಗಲಿ,
ಪಂಡಿತ ವಿದಗ್ಧ ಜಾಣ ಗಂಭೀರ ಸಂಪದನಾದಡೂ ಆಗಲಿ
ಯಾಚಕತನದಲ್ಲಿಘಾತಕತನದಿಂದ ಬೇಡುವುದೆ ಜೀವನ.
ಆ ಜೀವನವ ಮಜಿಸಿದು ಒಜಿಗಿದುದೆ ಮಾರಿ
ಆ ಮಜಿವೆಯ ಹಜಿಸಿದುದೆ ಕಾಲಾಂತಕ ಭೀಮೇಶ್ವರ
ಲಿಂಗವು.

ಈ ಯಾಚಕತನದ ಬದುಕು ವಂಚನೆಯಿಂದ ಕೂಡಿರುತ್ತದೆ. ಜಾತಿ, ದೇವರು, ಪಾಂಡಿತ್ಯ ಮುಂತಾದವುಗಳ ಸೋಗನ್ನು ಕಾಯಕಕ್ಕೆ ತಳಕುಹಾಕಿ ಕೈಯೊಡ್ಡುವವರನ್ನು ಬೊಮ್ಮಯ್ಯ ಖಂಡಿಸಿದ್ದಾನೆ. ಭಿಕ್ಷೆ ಬೇಡುವುದು ಘಾತಕತನವೆಂದು ಎಚ್ಚರಿಸಿದ್ದಾನೆ. ಇಂಥವರು ಮೈಗಳ್ಳರಾಗಿ ತಿರುಕರಾಗಿ ದೇವರನ್ನೇ ಮರೆತಿರುವರು. ಇವರಲಿ ಮಾರಿ ಮೈಮರೆತು ಸುಖವಾಗಿ ನಿದ್ರೆಗೈಯುತ್ತಿರುವಳು. ಇವರನ್ನು ತನ್ನ ನಿವಾಸವನ್ನಾಗಿ ಮಾಡಿಕೊಂಡಿರುವಳು. ಎಚ್ಚರ ದಪ್ಪಿ ಮಲಗಿದ ಮಾರಿಯನ್ನು ಅವರಲ್ಲದೆ ಮತ್ತಾರು ಎಚ್ಚರಿಸ

ಬೇಕು ? ಅಂಥವರು ಒಂದೇ ತತ್ವವನ್ನು ಮನವಮುಟ್ಟಿ ಆಚರಣೆಯಲ್ಲಿ ತರಬೇಕಾದುದು ಅವಶ್ಯಕ. ಅದೇ ಕಾಯಕತತ್ವಕ್ಕೆ ಮೂಲ. ಆ ತತ್ವದಿಂದ ಅವರ ತನುಮನದ ಜಾಡ್ಯ ಬಿಟ್ಟುಹೋಗುವದು. ಭಾವಶುದ್ಧವಾದಾಗಲೇ ಸಮಾಜದಲ್ಲಿ ಅವರಿಗೊಂದು ಸ್ಥಾನ ಲಭಿಸುವದು. ಅವರ ಕಾಯಕ-ವೃತ್ತಿ ದೇವರಿಗೆ ಎಡೆಯಾಗುವದು. ನಿಜವಾಗಿ ಬೊಮ್ಮಣ್ಣನ ಈ ಕಾಯಕ ದುಡಿದವರಿಗೇ ಅನ್ನ-ವೆನ್ನುವ ಘನತತ್ವವನ್ನು ಬೋಧಿಸುತ್ತದೆ. ಮೋಕ್ಷಕ್ಕೂ ಕಾಯಕವೇ ಮೂಲವೆಂಬುದನ್ನು ಆತನು ಹೇಳದೆ ಬಿಟ್ಟಿಲ್ಲ. ಅಂದಿನ ಸಮಾಜದಲ್ಲಿ ಈ ಸರಳ ತತ್ವದಿಂದ ಸರ್ವರೂ ಸ್ವತಂತ್ರ ಉದ್ಯೋಗಿಗಳಾಗಿರುವದು ‘ಸಾಧ್ಯವಾಯಿತು.” ಆಸೆಯೆಂಬುದೆ ಮಾರಿ ನಿರಾಸೆಯೆಂಬುದೇ ದೇವಪದ” ಎಂಬ ಈತನ ಮಾತು ಎಷ್ಟೊಂದು ಅರ್ಥಪೂರ್ಣವೆಂಬುದನ್ನು ಅರಿಯಬಹುದು. ಈ ಆಸೆಯೇ ಭಾವವನ್ನು ಅಶುದ್ಧಗೊಳಿಸಿ ಮಾರಿಯ ನೆಲೆಯಾಗಲು ಕಾರಣವಾಗುವದು. ಹೆಣ್ಣು, ಹೊನ್ನು, ಮಣ್ಣು ಸಕಲ ಭೋಗಗಳೆಲ್ಲ ಮಾರಿಯಲ್ಲ; ಮನದ ಮುಂದಣ ಆಸೆಯೇ ಮಾರಿ. ಆ ಆಸೆಯನ್ನು ನಿರಾಸೆಯಲ್ಲಿ ಪರಿವರ್ತಿಸಿದಾಗ ಅದೇ ಮಾರಿಯು ಸಾಕ್ಷಾತ್ ಉಮೆಯಾಗುವಳು.

ಹುಸಿದು ಮಾಡಿದವರುಂಟು ಆಸೆಯಲ್ಲಿ ದೆಸೆಗೆಡಿಸಿ
ಮಾಡಿದವರುಂಟು
ಪಶುಗಳ ಕೊಂದು ಪಿಸಿತವ ಪೂಜೆ ಮಾಡಿದವರುಂಟು
ಅದು ತನ್ನಯ ಅಸುವಿಂಗಲ್ಲದೆ, ಅದು ತನ್ನಯ
ಶಿಶುವಿಂಗಲ್ಲದೆ
ಅದು ತನ್ನಯ ವಿಷಯ ಲಂಪಟದ ಶಕ್ತಿಗಲ್ಲದೆ,

ದೇವಂಗೆಂದು ಕುಱಿತು ಆವ ಕಾಯಕವ ಮಾಡಿದಡೂ
ಕಾಲಾಂತಕ ಭೀಮೇಶ್ವರಲಿಂಗಕ್ಕೆ ಅರ್ಪಿತವು

ಕಾಯಕ ಯಾವುದೇ ಇದ್ದರೂ ಅದನ್ನು ದೇವರಿಗೆಂದು ಮಾಡಿದರೆ ಸಾಕ್ಷಾತ್ಕಾರ ಸಿದ್ಧಿಯಾಗುವುದೆನ್ನುವ ಬೊಮ್ಮಯ್ಯನ ನುಡಿ ಹೃದಯಕ್ಕೆ ತಟ್ಟದಿರದು.ಜನ ತನಗಾಗಿ,ತನ್ನವರಿಗಾಗಿಕಾಯಕ ಮಾಡಿದಾಗ ಅದರಲ್ಲಿ ಸ್ವಾರ್ಥದ ಸುಳುಹಲ್ಲದೆ ಮತ್ತೊಂದೇ ನಲ್ಲ. ಸ್ವಾರ್ಥ, ಲೋಭ, ವಂಚನೆಯನ್ನು ಮನದಲ್ಲಿ ತುಂಬಿ ಕೊಂಡ ಮನುಷ್ಯ ತನಗಾಗಿ. ಕೇವಲ ತಮ್ಮವರಿಗಾಗಿ ಕಾಯಕ ಕೈಕೊಂಡರೆ ಅದು ಆತ ಬದುಕಲಿಕ್ಕೆ ಹಾದಿಯಾದೀತೆ ಹೊರತು ದೇವನನೊಲಿಸುವ ಸಾಧನವಾಗದು. ಅಂತೆಯೇ ಆತ ಯಾವುದೆ ಕೆಲಸ ಮಾಡಿದರೂ ದೇವರಿಗಾಗಿ ಅದನ್ನು ಮಾಡುತ್ತಿದ್ದೇನೆಂಬ ಭಾವದಿಂದ, ಅವನಿಗೇ ಅರ್ಪಿತವೆಂಬ ಮನದಿಂದ ಮಾಡಿದರೆ ನಿಜಕ್ಕೂ ಬದುಕು ಪಾವನವಾಗುವದು.

ಢಕ್ಕೆಯ ಬೊಮ್ಮಣ್ಣನ ವಚನಗಳಲ್ಲಿ "ಢಕ್ಕೆ"

ಶರಣರು ಈ ದೇಹಕ್ಕೆ, ಜೀವಕ್ಕೆ ಬಹು ಮಹತ್ವ ಕೊಟ್ಟರು. ಈ ದೇಹವನ್ನು ಮಾಯೆಯೆಂದು ಅದನ್ನು ದಂಡಿಸಿದರೆ, ಮುಕ್ತಿ ಸಿಗುವದೆಂಬ ಮಾತನ್ನು ಅವರು ಅಲ್ಲಗಳೆದಿದ್ದಾರೆ. ದೇಹ ದಂಡನೆ ಯಿಂದ ಮೋಕ್ಷವಿಲ್ಲ. ಅದು ವ್ಯರ್ಥವೆಂದು ಖಂಡತುಂಡವಾಗಿ ನುಡಿದಿದ್ದಾರೆ. ಈ ದೇಹವು ಶಿವನ ವಾಸಸ್ಥಾನ. ದೇಹವೇ

ದೇವಾಲಯ. ದೇಹ ಆರೋಗ್ಯಶಾಲಿಯಾಗಿದ್ದರೆ ದೇವರನ್ನು ಒಲಿಸಬಹುದು. ರೋಗವುಳ್ಳ ತನು ಎಷ್ಟು ದಿನ ಉಳಿದೀತು? ಎಷ್ಟು ದಿನ ದೇವರ ಪೂಜೆಗೈದೀತು? ಆದುದರಿಂದ ದೇಹವನ್ನು ಆರೋಗ್ಯಕರವಾಗಿ ಇಟ್ಟುಕೊಳ್ಳಬೇಕೆಂದು ಬೊಮ್ಮಯ್ಯ ಹೇಳುತ್ತಾನೆ. ಅಸ್ಥಿರವಾದ ದೇಹ ಹೇಗಿದ್ದರೇನು ? ಎಂದು ಉಪೇಕ್ಷಿಸಬಾರದು. ಈ ವಿಷಯವನ್ನು ಉಚಿತ ಹೋಲಿಕೆಗಳೊಂದಿಗೆ ತಿಳಿಸಿ ದೇಹದ ಮಹತ್ವವನ್ನೂ ಆದರ ಕಾರ್ಯವನ್ನೂ ವಿಸ್ತರಿಸಿ ಬಹು ಮನೋಜ್ಞವಾಗಿ ಅರುಹಿದ್ದಾನೆ. ಬೊಮ್ಮಯ್ಯ ತನ್ನ ಕಾಯಕದ ವಸ್ತುವಾದ ಢಕ್ಕೆಗೆ ಈ ದೇಹವನ್ನು ಹೋಲಿಸಿದ್ದಾನೆ. ಢಕ್ಕೆ ದೇಹವಾದರೆ ಢಕ್ಕೆಯ ಉಲುಹುಗಳು ಈ ಮನದಲ್ಲಿ ಸಂಚರಿಸುವ ವಿಷಯಗಳು. ಅದರಂತೆ ಢಕ್ಕೆ ದೇಹವಾದರೆ ಅದರ ಉಲುಹೇ ಪ್ರಾಣವು. ಎಷ್ಟೊಂದು ಮನೋಹರ ರೂಪಕ ! ಢಕ್ಕೆ ಗಟ್ಟಿಮುಟ್ಟಾದರೆ ನಾದ ಚೆನ್ನಾಗಿ ಹೊರಡುವಂತೆ, ಈ ದೇಹ ಆರೋಗ್ಯಶಾಲಿಯಾಗಿದ್ದರೆ, ಉಸಿರು ಬಹಳ ದಿನಗಳವರೆಗೆ ಆಡುವುದು. ಈ ಉಸಿರಿರುವಾಗಲೇ ಈ ಮನದ ಚೇಷ್ಟೆಗಳನ್ನು ಅಡಗಿಸಿ ಆಧ್ಯಾತ್ಮ ಸಾಧನೆ ಮಾಡಬೇಕು. ಅಂತೆಯೇ ಆತ ಢಕ್ಕೆಯ ಉಲುಹು ಅಡಗುವ ಮುನ್ನವೇ ದೃಢನಿರ್ಧಾರ ಮಾಡಿ ಮುಕ್ತಿಗಳಿಸಬೇಕು ಎಂದಿದ್ದಾನೆ. ಢಕ್ಕೆಯ ಉಲುಹು ಎಂಬುದಕ್ಕೆ ಅರ್ಥ ವ್ಯಾಪ್ತಿ ಇದೆ. ಢಕ್ಕೆ ಧ್ವನಿ ಮಾಡುತ್ತದೆ. ಈ ಬದುಕಿಗೂ ಒಂದು ಧ್ವನಿ ಇದೆ. ಆ ಧ್ವನಿಯಿಂದ ಮನುಷ್ಯ ಮಾಯೆಯ ಬಂಧನಕ್ಕೆ ಸಿಲುಕಿರುವನು. ಈ ಉಲುಹನ್ನು ತಿಳಿದಾಗ ಆತ ಶಿವನಾಗುವನು. ಈತನ ಢಕ್ಕೆಯ ಬಗೆಗಿರುವ ಬೆಡಗಿನ ವಚನವೊಂದು ಬಹು ಚೆನ್ನಾಗಿದೆ.

ಕಾಯಕವೆಂಬ ಢಕ್ಕೆ; ಕ್ರೀ ಭಾವವೆಂಬ ಹೊದಕೆ
ಅಱಿವೆಂಬ ನೇಣಿನಲ್ಲಿ ಸ್ಥೂಲ ಸೂಕ್ಷ್ಮವೆಂಬ
ಹೊಡೆಚೆಂಡು ಕಟ್ಟಿ
ಹೊಯ್ಯುತ್ತಿದೆ ಢಕ್ಕೆ. ಕಾಲಾಂತಕ ಭೀಮೇಶ್ವರಲಿಂಗವಲ್ಲ
ದಿಲ್ಲಾ ಎಂದು.

ಇದಕ್ಕೆ ಸಕಲ ಪೂರಾತನರ ಬೆಡಗಿನ ವಚನಗಳು ಎಂಬ ಗ್ರಂಥದಲ್ಲಿ ಹೀಗೆ ಟೀಕೆ ಬರೆದಿದ್ದಾರೆ.

ಸುಜ್ಞಾನೋದಯವಾದ ಶರಣನ ಪಂಚಭೂತ ಕಾಯ ವಳಿದು ಸತ್ಕ್ರಿಯಾಚಾರ ಸಂಬಂಧವಾಯಿತ್ತೆಂಬುದೀಗ. ಕಾಯ ವೆಂಬ ಢಕ್ಕೆ ಕ್ರಿಯಾ ಎಂಬ ಶಬ್ದಕ್ಕರ್ಥ.

ಅಂತು ಸತ್ಕ್ರಿಯಾಚಾರ ಸಂಬಂಧವಾದ ಶರಣನ ಶಿವಭಾವ ವೆಲ್ಲಕ್ಕೂ ಮೇಲುಹೊದಕೆಯಾಗಿರ್ಪ್ಪದೆಂಬುದೀಗ, ಭಾವವೆಂಬ ಹೊದಕೆ ಎಂಬ ಶಬ್ದಕ್ಕರ್ಥ.

ಅಂತಪ್ಪ ಶರಣ ಮಹಾಜ್ಞಾನ ಸೂತ್ರದಲ್ಲಿ ಸಂಬಂಧಿಸಿದ ನೆಂಬುದೀಗ. ಅಱಿವೆಂಬ ನೇಣಿನಲ್ಲಿ – ಎಂಬ ಶಬ್ದಕ್ಕರ್ಥ.

ಶರಣ ತನ್ನ ಅಂತರಂಗ ಬಹಿರಂಗವ ಸತ್ಕ್ರಿಯಾ ಜ್ಞಾನಂ-ಗಳಲ್ಲಿ ಗುರುಕರುಣದಿಂ ಇಷ್ಟಲಿಂಗ, ಪ್ರಾಣಲಿಂಗ ಸಂಬಂಧವ ಮಾಡಿಕೊಂಡಿಹನೆಂಬುದೀಗ, ಸ್ಥೂಲ ಸೂಕ್ಷ್ಮವೆಂಬ ಹೊಡೆ ಚೆಂಡಕಟ್ಟಿ ಎಂಬ ಶಬ್ದಕ್ಕರ್ಥ.

ಆ ಇಷ್ಟ ಪ್ರಾಣಲಿಂಗದಲ್ಲಿ ಸತ್ಕ್ರಿಯಾಜ್ಞಾನವಿಡಿದಾಚರಿಸಿ ಬೆರೆಸುತ್ತಿರ್ದ ಶರಣನೆಂಬುದೀಗ, ಹೊಯ್ಯುತ್ತಿದೆ ಢಕ್ಕೆ ಕಾಲಾಂತಕ ಭೀಮೇಶ್ವರಲಿಂಗವಲ್ಲದಿಲ್ಲಾ ಎಂಬ ಶಬ್ದಕ್ಕರ್ಥ:

ನಾಡೆಲ್ಲರು ಮುಟ್ಟಿ ಪೂಜಿಸುವದು ಸಿರಿದೇವಿ.
ಸತ್ಯರೆಲ್ಲರು ಮುಟ್ಟಿ ಪೂಜಿಸುವದು ಮೂದೇವಿ.
ನಾ ಮೊಱದಲ್ಲಿ ಹೊತ್ತಾಡುವುದು ಉರಿಮಾರಿ.
ಸಿರಿ, ಉರಿ, ಮೂದೇವಿ ಮೊಱದ ಗೋಟಿಗೊಳಗಾಯಿತ್ತು,
ಭಕ್ತಿಯು ದನಿಗೆ ಮುನ್ನವೆ ಸಿಕ್ಕದಿರು
ಕಾಲಾಂತಕ ಭೀಮೇಶ್ವರಲಿಂಗವನರಿಯಬಲ್ಲಡೆ.

ಇದಕ್ಕೂ ಸಕಲಪುರಾತನರ ವಚನದಲ್ಲಿ ಈ ರೀತಿಯಾಗಿ ಟೀಕು ಬರೆದಿದೆ.

ಗುರುಕಾರುಣ್ಯದಿಂದಂಗದಲ್ಲಿ ಲಿಂಗಸಂಬಂಧವಾಗಿ ಆ ಇಷ್ಟಲಿಂಗಕ್ಕೆ ಉಪಾಧಿಯಿಂ ಕ್ರೀಗಳ ಮಾಡಿ ಫಲಪದಂಗಳ ಪಡೆದು ಭೋಗಿಸುತ್ತಿಹುದು ಉಪಾಧಿಯ ಮಾಟವೆಂಬುದೀಗ. ನಾಡೆಲ್ಲರು ಮುಟ್ಟಿ ಪೂಜಿಸುವದು ಸಿರಿದೇವಿ ಎಂಬ ಶಬ್ದಕ್ಕರ್ಥ.

ಸತ್ಯ ಸದಾಚಾರವಂತರಪ್ಪ ಸದ್ಭಕ್ತರುಗಳು ಉಪಾಧಿಯಳಿದು ನಿರುಪಾಧಿ ಮಾಟದಲ್ಲಿ ನಿಂದು ಗುರುಲಿಂಗಜಂಗಮದಲ್ಲಿ ತ್ರಿವಿಧ ಭಕ್ತಿಗಳಿಂದಾಚರಿಸುತ್ತಿಹರೆಂಬುದೀಗ, ಸತ್ಯರೆಲ್ಲರು ಮುಟ್ಟಿ ಪೂಜಿಸುವದು ಮೂದೇವಿ ಎಂಬ ಶಬ್ದಕ್ಕರ್ಥ.

ಉಪಾಧಿ, ನಿರುಪಾದಿ ಎಂಬುಭಯವನು ಮೀರಿ ಸಹಜ ಮಾಟದಲ್ಲಿ ನಿಂದು ತನ್ನಾಚಾರಾಂಗದಲ್ಲಿ ಚಿದಗ್ನಿ ಸ್ವರೂಪವಾದ ಚಿದ್ಘನಲಿಂಗವ ಧರಿಸಿಕೊಂಡು ಅಭಿನ್ನ ಜ್ಞಾನ ಕ್ರೀಯಿಂದಾಚರಿಸಿ ಸಕಲಪ್ರಪಂಚ ಸಂಹರಿಸಿದನೆಂಬುದೀಗ, ನಾ ಮೊರದಲ್ಲಿ ಹೊತ್ತಾಡುವದು ಉರಿಮಾರಿ ಎಂಬ ಶಬ್ದಕ್ಕರ್ಥ.

ಉಪಾಧಿ ನಿರುಪಾಧಿ ಸಹಜಮಾಟವೆಂಬ ತ್ರಿವಿಧವು ಶರಣನ ಆಚಾರ ಸ್ವರೂಪವಾದ ಅಂಗತ್ರಯದಲ್ಲಿ ಅಡಗಿರುತ್ತಿಹವು ತ್ರಿವಿಧ

ಮಾಟವೆಂಬುದೀಗ, ಸಿರಿ ಊರಿ ಮಾಯಾದೇವಿ ವೇಜಿದ ಗೋಟಿ ಗೊಳ ಗಾಯಿತ್ತು ಎಂಬ ಶಬ್ದಕ್ಕರ್ಥ.

ದೇಹಾದಿ ಪ್ರಪಂಚಿನ ಶಬ್ದಜಾಲಕ್ಕೆ ಸಿಲ್ಕಿ ಕೆಡಬೇಡವೆಂದು ಅನ್ಯೋಪದೇಶವಾಗಿ ನಿರೂಪಿಸುತ್ತಿರ್ದ ಶರಣನೆಂಬುದೀಗ, ಢಕ್ಕೆಯ ದನಿಗೆ ಮುನ್ನವೆ ಸಿಕ್ಕದಿರಿ ಕಾಲಾಂತಕ ಭೀಮೇಶ್ವರ ಲಿಂಗವನಱಿಯಬಲ್ಲಡೆ ಎಂಬ ಶಬ್ದಕ್ಕರ್ಥ.

ಢಕ್ಕೆಯ ಉಲುಹನ್ನು ಸರಿಯಾಗಿ ಅರಿತು ಅದನ್ನು ಅಡಗಿಸಿದಾಗ ಢಕ್ಕೆಯ ಧ್ವನಿ ಹೊರಗಾಗುವದು; ಆಗ ಕಾಲಾಂತಕ ಭೀಮೇಶ್ವರಲಿಂಗ ಒಳಗಾಗುವನು. ಬೊಮ್ಮಣ್ಣ ಜಟಿಲವಾದ ಅಧ್ಯಾತ್ಮಿಕ ತತ್ತ್ವವನ್ನು ಇಲ್ಲಿ ಸರಳವಾಗಿ ಚಿತ್ರಿಸಿದ್ದಾನೆ. "ಈ ಢಕ್ಕೆಯ ಉಲುಹು ಅಡಗುವದಕ್ಕೆ ಮುನ್ನವೇ ಕಾಲಾಂತಕ ಭೀಮೇಶ್ವರಲಿಂಗವನರಿಯಬೇಕು" ಎಂಬ ತತ್ತ್ವವೊಂದೇ ಜನಮನವನ್ನು ಸುಮಾರ್ಗದಲ್ಲಿ ನಡೆಸುವದು. ಇಲ್ಲಿ ಸೌಂದರ್ಯ, ತತ್ತ್ವ, ಆಧ್ಯಾತ್ಮಿಕತೆ ಎಲ್ಲವೂ ಅಡಗಿದೆ.

ಢಕ್ಕೆಯ ಬೊಮ್ಮಣ್ಣನ ವಚನಗಳಲ್ಲಿ "ಸಮಾಜ"

ಢಕ್ಕೆಯ ಬೊಮ್ಮಣ್ಣನ ವಚನಗಳಲ್ಲಿ ಅಲ್ಲಲ್ಲಿ ತುಸು ಮಟ್ಟಿಗೆ ಸಮಾಜ ವಿಡಂಬನೆ ಇವೆ. ಸರ್ವಶರಣರ ಧ್ಯೇಯದೋಷಗಳನ್ನು ತಿದ್ದಿ ಸಮಾಜವನ್ನು ಸರ್ವಾಂಗಸುಂದರ ಮಾಡುವುದಾಗಿದೆ. ಇದಕ್ಕೆ ಢಕ್ಕೆಯ ಬೊಮ್ಮಣ್ಣ ಹೊರತಾಗಿಲ್ಲ. ಆತನ ವಚನಗಳಲ್ಲಿ ಇದನ್ನು ಕಾಣಬಹುದು:

ಸತಿಯ ಗುಣವ ಪತಿ ನೋಡಬೇಕಲ್ಲದೆ,
ಪತಿಯ ಗುಣವ ಸತಿ ನೋಡಬಹುದೆ ಎಂಬರು,
ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೆ?
ಪತಿಯಿಂದ ಬಂದ ಸೋಂಕು ಸತಿಯ ಕೇಡಲ್ಲವೆ?
ಒಂದಂಗದ ಕಣ್ಣು ಉಭಯದಲ್ಲಿ ಬಂದು ಹಿಂಗಲಿಕ್ಕೆ
ಭಂಗವಾರಿಗೆಂಬುದ ತಿಳಿವಲ್ಲಿಯೆ
ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸಲೆ ಸಂದಿತ್ತು,

ಇಲ್ಲಿ ಬೊಮ್ಮಯ್ಯನ ವಿಶಾಲ ಮನೋಭಾವನೆ, ದೂರದೃಷ್ಟಿಯ ಪರಿಚಯ ಆಗದಿರದು. ಹೆಣ್ಣು ಕೀಳು, ಆಕೆಗೆ ಸ್ವಾತಂತ್ರ್ಯವಿಲ್ಲ ಎನ್ನದೆ ಹೆಣ್ಣಿಗೂ ಗಂಡಿನಷ್ಟೇ ಸಮಾನತೆ, ಸ್ವಾತಂತ್ರ್ಯ ಕೊಟ್ಟಿದ್ದಾನೆ ಬೊಮ್ಮಣ್ಣ. ಅಲ್ಲದೆ ಸೃಷ್ಟಿಯಲ್ಲಿ ಇಬ್ಬರೂ ಸಮಾನರೆಂಬುದನ್ನು ಎತ್ತಿ ಹಿಡಿದಿದ್ದಾನೆ. ಸತಿಯ ಗುಣ ನಡತೆ ತತ್ವಗಳನ್ನು ಪತಿ ನೋಡಬೇಕು; ಆದರೆ ಪತಿಯ ಗುಣಗಳನ್ನು ಸತಿ ನೋಡಬಾರದು ಎನ್ನುವರು. ಸತಿಯಿಂದ ಆದ ತಪ್ಪು ಪತಿಗೂ ಪತಿಯಿಂದ ಆದ ತಪ್ಪು ಸತಿಗೂ ಪರಿಣಾಮ ಮಾಡುವುದು. ಪತಿಯಿಂದಾದ ತಪ್ಪನ್ನು ಅರುಹಲು ಸತಿಗೆ ಸ್ವಾತಂತ್ರ್ಯವಿದೆ, ಅರ್ಹತೆ ಇದೆ. ಒಂದಂಗದ ಕಂಗಳಲ್ಲಿ ಒಂದು ಹಿಂಗಿದರೆ ಭಂಗ ಯಾರಿಗೆಂದರಿತರೆ ಸಾಕು. ಸತಿಪತಿಯರಲ್ಲಿ ಒಬ್ಬರಿಂದಾದ ತಪ್ಪು ಇಬ್ಬರನ್ನೂ ದೂಷಣೆಗೆ ಗುರಿಮಾಡುವದು. ಸತಿಪತಿಯರಲ್ಲಿ ಮೇಲುಕೀಳೆಂಬ ಭಾವ ಇರಕೂಡದು. ಅಲ್ಲಿ ಕಂಗಳೆರಡು ಬೇರೆಯಾದರೂ ನೋಡುವ ನೋಟ ಒಂದೇ ಎಂಬಂತೆ ಸತಿಪತಿಗಳಿಬ್ಬರಾದರೂ ಭಾವ ಒಂದೇ ಆಗಿರಬೇಕು. ಆಗಲೇ ಬದುಕು

ಸಾರ್ಥಕವಾಗುವುದು. ಬೊಮ್ಮಣ್ಣ ಹೆಣ್ಣಿನ ಸ್ಥಾನಮಾನದ ಬಗ್ಗೆ ನಿಷ್ಠುರವಾಗಿ ಮಾತಾಡಿದ್ದಾನೆ. ಆತನ ವೈಶಾಲ್ಯತೆ, ದೂರದೃಷ್ಟಿ, ಸೂಕ್ಷ್ಮತೆಯನ್ನು ಮೆಚ್ಚಲೇಬೇಕು. ಹೆಣ್ಣಿಗೆ ಸಮಾನತೆ ಬೇಕೆಂದು ಹೇಳಿದ್ದಲ್ಲದೆ ದಾಂಪತ್ಯವು ಹೇಗಿದ್ದರೆ ಪರಮಸುಖಿ ಎಂಬುದನ್ನೂ ತಿಳಿಸಿದ್ದಾನೆ.

ತಾನಱಿಯದೆ ಮಾಡಿದ ದೋಷಕ್ಕೆ ತನಗೆ ಅಘೋರವಿಲ್ಲ.
ಅದು ಜಗದ ಹುದುಗು,
ತಾನಱಿದು ಅಲ್ಲ ಅಹುದೆಂದು ಎಲ್ಲರಿಗೆ ಹೇಳಿ
ಪರಧನದಲ್ಲಿ, ಪರಸತಿಯಲ್ಲಿ, ಅನ್ಯರ ನಿಂದೆಯಲ್ಲಿ.
ವ್ರತಾಚಾರ ಭಂಗಿತರಲ್ಲಿ
ಇದನಱಿದು ಅನುಸರಣೆಯ ಮಾಡಿದಡೆ ಕುಂಭೀನರಕದಲ್ಲಿ
ಹಿಂಗದಿರ್ಪನು

ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸ್ವಪ್ನದಲ್ಲಿ ದೂರಸ್ಥನು. ದಿನನಿತ್ಯ ನಡೆದ ವ್ಯವಹಾರವನ್ನೇ ವಿಡಂಬಿಸಿ ಸೂಕ್ಷ್ಮವಾಗಿ ಅರುಹಿದ್ದಾನೆ. ಮಾಡಿದ ತಪ್ಪು ತನಗೆ ತಿಳಿಯದೆ ಆಗಿದ್ದರೆ, ಅದು ತಪ್ಪಲ್ಲ. ಆದರೆ ಹಾಗೆಂದು ಪದೇ ಪದೇ ಅದೇ ತಪ್ಪನ್ನೇ ಮಾಡಕೂಡದು. ಆದರೆ ತಪ್ಪೆಂದು ಅರಿತರೂ, ಪರಸತಿಯಲ್ಲಿ ಪರಧನದಲ್ಲಿ. ಪರನಿಂದೆಯಲ್ಲಿ, ವ್ರತಭಂಗಿತರಲ್ಲಿ ಬೆರೆತರೆ ಅಂಥವರಿಗೆ ಘೋರ ನರಕವೇ ಕಾದಿರುತ್ತದೆ. ತಿಳಿದೂ ಮಾಡುವ ತಪ್ಪಿತಸ್ಥರನ್ನು ಯಾರೂ ಕ್ಷಮಿಸಲಾರರು, ಸಹಿಸಲಾರರು. ಅಂಥವರು ಅಪರಾಧಿಗಳಾಗಿರುವರಲ್ಲದೆ ತಮ್ಮ ಆತ್ಮಕ್ಕೆ ತಾವೇ ವಂಚನೆ ಮಾಡಿಕೊಳ್ಳುವರು. ಆತ್ಮ ವಂಚನೆಯೂ ಪಾಪವೇ! ಇಂತವರಿಗೆ ದೇವ ಸ್ವಪ್ನದಲ್ಲೂ

ಕಾಣನು. ಆದರೆ ತಪ್ಪು ತಿದ್ದಿಕೊಂಡರೆ ಸಮಾಜ ನೀತಿವಂತರ ಬೀಡಾಗುವದು.

ಈ ರೀತಿಯಾಗಿ ಬೊಮ್ಮಣ್ಣನ ವಚನಗಳಲ್ಲಿ ಸಮಾಜ ಸುಧಾರಣೆಯ ವಿಷಯ ಬಂದಿದೆ. ಹೇಳಿದ್ದು ತುಸವೇನಿಸಿದರೂ ಅದು ಇಡೀ ಸಮಾಜವನ್ನೇ ಪರಿವರ್ತಿಸಿ ಬಿಡುವದಾಗಿದೆ.

ಢಕ್ಕೆಯ ಬೊಮ್ಮಣ್ಣನ "ಸಂದೇಶ"

ಬೊಮ್ಮಣ್ಣ ತನ್ನ ವಚನಗಳಿಂದ, ಕಾಯಕದಿಂದ ಸಮಾಜ ವನ್ನು ಉದ್ಧರಿಸಲು ಪ್ರಯತ್ನಿಸಿದನು. ಅದರಲ್ಲೇ ಅತ, ಜಗಕ್ಕೆ ಒಂದು ಸಂದೇಶವನ್ನು ಇತ್ತಿದ್ದಾನೆ. ಆ ಸಂದೇಶವು ಚಿರನೂತನ ವಾದದ್ದು.

ಸೌಭಾಗ್ಯದಿಂದ ಮಾಡುವರೆಲ್ಲರೂ ಸಂತೋಷಭಾವಿಗಳು
ಭಕ್ತಿಯಿಂದ ಮಾಡುವರೆಲ್ಲರೂ ತ್ರಿವಿಧಭಾವಿಗಳು
ಒಂದೆಂದು ಹಿಂಗಿ ಮಾಡುವನ್ನಬರ ರುದ್ರನ
ಉರಿಗೊಡಲಾಯಿತ್ತು
ಬಂದುದ ನೇತಿಗಳೆಯದೆ ಬಾರದುದಕ್ಕೆ ದೋಟಿಯನಿಕ್ಕದೆ
ಬಂದುದಕ್ಕೆ ಮನಮುಕ್ತನಾಗಿ ಸಂದುದು
ಕಾಲಾಂತಕ ಭೀಮೇಶ್ವರಲಿಂಗಕ್ಕರ್ಪಿತವಾಯಿತ್ತು.

"ಬಂದುದ ನೇತಿಗಳೆಯದೆ ಬಾರದುದಕ್ಕೆ ದೋಟಿಯನಿಕ್ಕದೆ
ಬಂದುದಕ್ಕೆ ಮನಮುಕ್ತನಾಗಿ ಸಂದುದು
ಕಾಲಾಂತಕ ಭೀಮೇಶ್ವರ ಲಿಂಗಕ್ಕರ್ಪಿತವಾಯಿತ್ತು."

ಎನ್ನುವಲ್ಲಿ ಬದುಕನ್ನು ಹೇಗೆ ಕಾಣ

ಬೇಕು? ಹೇಗೆ ಸ್ವೀಕರಿಸಬೇಕು? ಎಂಬುದನ್ನು ಅರುಹಿದ್ದಾನೆ. ಜೀವನ ನಿಂತ ನೀರಲ್ಲ. ಆ ನೀರಿನಲ್ಲಿ ಅನೇಕ ಝುರಿಗಳು, ಸೆಲೆಗಳು, ಹಳ್ಳಕೊಳ್ಳಗಳು ಬಂದು ಸೇರುತ್ತವೆ. ಆ ಜೀವನದಿಗೆ ಒಮ್ಮೊಮ್ಮೆ ಉಬ್ಬರವಿರುತ್ತದೆ. ಒಮ್ಮೊಮ್ಮೆ ಇಳಿತವಿರುತ್ತದೆ. ಅಲ್ಲಿ ಸುಖ ಬಂದರೆ ಹಿಗ್ಗಿ, ಅಹಂಕಾರಿಯಾಗದೆ ದುಃಖ ಬಂದರೆ ಕುಗ್ಗಿ ಬದುಕಿನಿಂದ ಓಡಿಹೋಗದೆ, ಎಲ್ಲವನ್ನು ಸಹಿಸಿಕೊಂಡು ಹೋಗಬೇಕು. ಬದುಕೊಂದು ಆಹ್ವಾನ; ಅದನ್ನು ಸ್ವೀಕರಿಸಿ ಹೋರಾಡಬೇಕು; ಅದೊಂದು ಸಮಸ್ಯೆ. ಪರಿಹರಿಸಬೇಕು; ಅದೊಂದು ಸುಂದರ ಗೀತೆ, ಹಾಡಬೇಕು. ಬದುಕನ್ನು ಹೀಗೇ ಎಂದು ಹೇಳಲುಬಾರದು. ಎದುರಿಸಿ ಹೋರಾಡುವಂಥ ಎದೆಗಾರಿಕೆಯನ್ನು ಗಟ್ಟಿತನವನ್ನು ಗಳಿಸಿ, ಬೆಳಸಬೇಕು.

ಬದುಕು ದುಃಖದಿಂದ ಕೂಡಿದರೂ ಅದನ್ನು ಮೆಟ್ಟಿನಿಲ್ಲಬೇಕೇ ಹೊರತು ಬೆನ್ನು ತೋರಿಸಿ ಓಡಿಹೋಗುವ ಹೇಡಿಯಾಗಬಾರದು. ಪಲಾಯನವಾದ ಒಳ್ಳೆಯದಲ್ಲ. ಹೇಡಿಯಾದವನು ಏನನ್ನೂ ಸಾಧಿಸುವದಿಲ್ಲ. ಅಂಥವರು ಇದ್ದೂ ಸತ್ತಂತೆಯೇ. ಕಷ್ಟ ಸುಖಗಳು ಒಂದರ ಹಿಂದೊಂದು ಬರುತ್ತಲೇ ಇರುತ್ತವೆ. ನಾವು ಬೇಡವೆಂದರೂ ಬಿಡುವದಿಲ್ಲ. ಮನಸ್ಸನ್ನು ಗಟ್ಟಿಮಾಡಿ ಪರಿಪಕ್ವಗೊಳಿಸಬೇಕು. ಸಮುದ್ರದ ದಂಡೆಯಲ್ಲಿ ನಿಂತಾಗ ಒಂದರ ಹಿಂದೊಂದು ತೆರೆಗಳು ಬಂದೇ ಬರುತ್ತವೆ. ಹಾಗೆ ತೆರೆಗಳು ಬರುವುದು ಬೇಡವೆಂದರೆ ಆದೀತೆ? ತೆರೆಗಳನ್ನು ನೋಡಿ ಆನಂದಪಡುವವರು ಧೈರ್ಯಶಾಲಿಗಳು. ಅಂತೆಯೇ ಬದುಕೆಂಬ ಶರಧಿಯಲ್ಲಿ ಕಷ್ಟದ ತೆರೆಗಳು ಬಂದು ಅಪ್ಪಳಿಸಿದರೂ ಅಚಲನಾಗಿರುವದನ್ನು

ಕಲಿಯಬೇಕು. ಇದನ್ನೇ ಬೊಮ್ಮಣ್ಣ ಬಂದುದ ನೀತಿಗಳೆಯದೆ ಎಂದಿದ್ದಾನೆ.

ಸದಾಸುಖವನ್ನು ಅಪೇಕ್ಷಿಸುವದು ಮನುಷ್ಯನ ಸ್ವಭಾವ. ಯಾವಾಗಲೂ ಸುಖವಿರಲಿ ಎಂದರೆ ಹೇಗೆ? ಕಷ್ಟಗಳಿದ್ದರೆ ಬದುಕು ಸ್ವಾರಸ್ಯಕರ; ನಾವು ಸುಖದ ಕನಸಿನ ಜಾಡನ್ನು ಹಿಡಿದು ಸಾಗಿದರೆ ಸಿಗುವುದು ಕಷ್ಟವೇ. ಅಂತೆಯೇ ಸುಖವು ಮಳೆಗಾಲದ ಮಿಂಚಿನಂತೆ ಮಿಂಚಿ ಮಾಯವಾಗುವದು. ಅಷ್ಟಕ್ಕೇ ಸಂತೋಷಪಡಬೇಕು. ಅದು ತಾನಾಗಿ ಬರುವವರೆಗೆ ಕಾಯಬೇಕು. ಸುಖ ಬಾರದಿದಾಗ ಅದಕ್ಕೆ ದೋಟಿಯನ್ನಿಕ್ಕಬಾರದು ಎನ್ನುತ್ತಾನೆ ಬೊಮ್ಮಯ್ಯ. ನಿಲುಕದ ಹಣ್ಣಿಗೆ ದೋಟಿಯನ್ನಿಕ್ಕಿದರೆ ಅದು ಸಿಗಬಹುದೆ? ಸಿಗುವದಿಲ್ಲ. ಹಾಗಾದಲ್ಲಿ ಶ್ರಮ, ವೇಳೆ ವ್ಯರ್ಥವಲ್ಲದೆ ಮನಸ್ಸು ಸಂಚಲವಾಗಿ ಅತೃಪ್ತಿ ಹೊಂದುವದು. ಅಂತೆಯೇ ಬೊಮ್ಮಣ್ಣ "ಬಾರದುದಕ್ಕೆ ದೋಟಿಯನ್ನಿಕ್ಕದೆ ಬಂದುದಕ್ಕೆ ಮನಮುಕ್ತನಾಗಿ ಸಂದುದು"-ಎನ್ನುವನು.

ಕಷ್ಟ ಬಂದರೂ ಸ್ವೀಕರಿಸಬೇಕು; ನಗುತ್ತ ಎದುರಿಸಬೇಕು ಸುಖ ಬಾರದಿದ್ದರೆ, ಅದನ್ನರಸುತ್ತ ಹೋಗುವ ಮೂರ್ಖತನ ಮಾಡದೆ, ಬಂದುದಕ್ಕೆ ಮನಮುಕ್ತನಾಗಿ, ಸಂದು ಬಂದಾಗ ನಿಶ್ಚಿಂತ ಮನೋಭಾವನೆಯಿಂದ ಕಾಯಬೇಕು. ಬದುಕಿನ ಎರಡು ಮುಖಗಳಾದ ಸುಖದುಃಖಗಳನ್ನು ಸಂತೋಷದಿಂದ ಸ್ವೀಕರಿಸಬೇಕು. ಬದುಕು ನಮಗೇನು ಕೊಟ್ಟಿದೆ ಅನ್ನುವದಕ್ಕಿಂತ ನಾವು ಅದಕ್ಕೇನು ಕೊಟ್ಟಿದ್ದೇವೆ – ಎನ್ನುವದು ಮುಖ್ಯ. ಬೊಮ್ಮಣ್ಣನ ಈ ತತ್ವದಂತೆ ನಡೆದಾಗಲೇ ಬದುಕು ಸಾರ್ಥಕ; ಅಲ್ಲದೆ ಆ ಬದುಕು ಕಾಲಾಂತಕಭೀಮೇಶ್ವರನಿಗೆ ಅರ್ಪಿತವಾಗುವದು.

—ಎಚ್. ಎಸ್. ಮುಕ್ತಾಯಕ್ಕ

kup wd 990–5,000–21–2–83

ಉಪನ್ಯಾಸ ಗ್ರಂಥಮಾಲೆಯ
ಇತ್ತೀಚಿನ ಪ್ರಕಟನೆಗಳು

---

೧ ಸಾಂಸರ್ಗಿಕ ರೋಗಗಳು ಮತ್ತು ಅವುಗಳನ್ನು
ತಡೆಗಟ್ಟುವ ಕ್ರಮಗಳು

—ಪಿ. ಎಸ್. ಬಣಕಾರ

೨ ಪ್ರಾಚೀನ ಭಾರತದಲ್ಲಿ ವಿದ್ಯಾಕೇಂದ್ರಗಳು

—ಅನಂತ ಕುಲಕರ್ಣಿ

೩ ಗಾದೆಗಳಲ್ಲಿ ಆರೋಗ್ಯ

—ಪಿ. ಎಸ್. ಶಂಕರ

೪ ಚಟಗಳು ರೂಢಿಗಳು ಮತ್ತು ಕ್ಯಾನ್ಸರ್

—ಎಸ್. ಜಿ. ನಾಗಲೋಟಿಮಠ

೫ ಸಿಡುಬುರೋಗ

—ಬಿ. ಟಿ. ತುಕೋಳ

೬ ರಂಗಭೂಮಿಯ ನಟಸಾರ್ವಭೌಮ
ಸಿದ್ರಾಮಪ್ಪ ಹಂದಿಗನೂರ

—ಬಿ. ಆರ್. ನಾಡಗೌಡ

೭ ಮೋಕ್ಷಗುಂಡಂ ವಿಶ್ವೇಶ್ವರಯ್ಯ

—ಶಿವಕುಮಾರ ಪಾಟೀಲ

೮ ತ್ರಿವೇಣಿಯವರ ಕಾದಂಬರಿಗಳು

—ವಿಜಯಶ್ರೀ ಸಬರದ

೯ ದಾಸಸಾಹಿತ್ಯ ಹಾಗೂ ಸಾಮಾಜಿಕ ಮೌಲ್ಯಗಳು

—ಇಲ್ಲೂರು ಜಯರಾಮಪ್ಪ

೧೦ ಸರ್ವೋದಯ ಹಾಗೂ ಜನಕಲ್ಯಾಣ

—ಎಂ.ಎಸ್.ಬಡಕಲಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೦೩